# ಅಪರಂಜಿ

ತಿಳಿನಗೆಯ ಕಾರಂಜಿ

ಅಕ್ಟೋಬರ್ 2018




ನಮ್ಮ ತಾತನ ಬಗ್ಗೆನೇ ನಮ್ಗೆ ಸರಿಯಾಗಿ ಗೊತ್ತಿಲ್ಲ,
ಇನ್ನು ಗಾಂಧಿ ತಾತ ಬಗ್ಗೆ ಹೇಗೆ ಗೊತ್ತಿರುತ್ತೆ ಸಾರ್?

ಬಿಡಿ ಪ್ರತಿ: ರೂ.10.00

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎಸ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎಸ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 36**

**ಸಂಚಿಕೆ - 01**

**ಅಕ್ಟೋಬರ್ - 2018**

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಶ್ರದ್ಧಾಂಜಲಿ | | 3 |
| ಓ.ವಿ. ವಿಜಯನ್ | ಶಿವಕುಮಾರ್ | 4 |
| ಜೆರೋಮ್ ಕೆ ಜೆರೋಮ್ | ಪಾಲಹಳ್ಳಿ ವಿಶ್ವನಾಥ್ | 7 |
| ಮುಂದಿನ ಸರ್ಕಾರದ.... | ಹೆಚ್. ಆರ್.ಹನುಮಂತರಾವ್ | 13 |
| ಮರೆವೆ | ಸಿ.ಆರ್.ಸತ್ಯ | 17 |
| ಮೊಬೈಲ್ ದಡ್ಡತನ | ಗಾಯತ್ರಿ ಮೂರ್ತಿ | 20 |
| ಸೇರಿಗೆ ಸವಾಸೇರು | ಶಾಂತರಾಜ ಐತಾಳ್ | 24 |
| ತುಂತುರು | ದಂನಆ | 27 |
| ಮುಖೇಶನ ಅಂಗಡಿ | ಪ್ರೇಮಾಭಟ್ | 28 |
| ಇಲ್ಲೇ ಇದೀನಲ್ಲಾ.. | ವೈ.ಎನ್. ಗುಂಡೂರಾವ್ | 30 |
| ಕತ್ತರಿ ಪ್ರಯೋಗದ ಸುತ್ತ | ಪ್ರಸಾದ್ ನಾಯಕ್ | 33 |
| ನಗೆಗಾರ ಗಾಂಧಿ | ಬೇಲೂರು ರಾಮಮೂರ್ತಿ | 38 |

ಮುಖಪುಟ ವ್ಯಂಗ್ಯಚಿತ್ರ – **ಅರುಣ್. ನಂದಗಿರಿ**

*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಸಿ.ಇ.ಟಿ ಸೀಟು ಹಂಚಿಕೆ; ಒಳಗೆ
ಸಕ್ರಮ, ಹೊರಗೆ ಅಕ್ರಮ – ಸುದ್ದಿ
ಬೇಲಿಯೇ ಹೊಲ ಮೇಯ್ದಂತೆ!!

★★★

ಲಂಡನ್ ತೆರಳಲು ನಲಪಾಡ್ ಅರ್ಜಿ – ಸುದ್ದಿ
ಅಲ್ಲಿ ಏನು ಕೋಲಾಹಲ ಮಾಡುತ್ತಾರೋ!!!

★★★

500 ಜನಕ್ಕೂ ಹೆಚ್ಚು ಮಂದಿಗೆ ಕೆಂಪೇಗೌಡ ಪ್ರಶಸ್ತಿ – ಪತ್ರಿಕೆ
ಕೆಂಪೇಗೌಡರು ನಸುನಕ್ಕರಂತೆ!!

★★★

ಭಾರತ, ಚೀನಾಕ್ಕೆ ಅಮೆರಿಕಾದ ಸಬ್ಸಿಡಿ ಅನಿವಾರ್ಯ – ಟ್ರಂಪ್
ದುರ್ಭಿಕ್ಷದಲ್ಲಿ ಅಧಿಕ ಮಾಸ!!

★★★

ಜ್ಞಾನಕ್ಕೆ ಜಾತಿ ಸಮೀಕರಣ ಸಲ್ಲದು – ಹೇಳಿಕೆ
ಇದರಲ್ಲಿ ಎರಡು ಮಾತಿಲ್ಲ!!

★★★


ರಾಹುಲ್ ಗಾಂಧಿಯ ನಡೆ; ಏನು? ಎತ್ತ?– ಪತ್ರಿಕೆ
ಯಕ್ಷ ಪ್ರಶ್ನೆ ಅಂದರೆ ಇದೇ!!

★★★

ಕಬ್ಬು ಬೆಳೆಗಾರರಿಂದ ವಿಧಾನಸೌಧ ಮುತ್ತಿಗೆ – ಸುದ್ದಿ
ಕಹಿ ವಾತಾವರಣ!!!

★★★

# ಅಗಲಿದ ಆತ್ಮ
# ಶ್ರೀ ಕೆ.ಎಲ್. ರಾಮದಾಸ್



ಸುಮಾರು 25 ವರ್ಷಗಳಿಂದ ಅಪರಂಜಿ ಬಳಗಕ್ಕೆ ಹತ್ತಿರವಾಗಿದ್ದವರು ಶ್ರೀ ಕೆ.ಎಲ್. ರಾಮದಾಸ್. ಹಾಸ್ಯೋತ್ಸವದ ದಿನಗಳಿಂದಲೂ ಹಾಸ್ಯೋತ್ಸವದ ಮತ್ತು ಅಪರಂಜಿ ಬಳಗದ ಅಭಿಮಾನಿಯಾಗಿದ್ದ ಶ್ರೀ ಕೆ.ಎಲ್. ರಾಮದಾಸ್ ತುಂಬಾ ಸರಳಜೀವಿ. ಎಲ್ಲರೊಂದಿಗೂ ಹೊಂದಿಕೊಂಡು ಹೋಗುವಂತಹ, ಎಲ್ಲರ ಕೆಲಸ ಕಾರ್ಯಗಳಿಗೆ ಸಹಕಾರಿಯಾಗಿ ವ್ಯವಹರಿಸುವ ಸ್ವಭಾವವುಳ್ಳವರು. ಅಪರಂಜಿ ಹಬ್ಬವನ್ನು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಮಾಡುವಾಗ, ಮೈಸೂರಿನಲ್ಲಿ ಮಾಡುವಾಗ, ಅಪರಂಜಿ ಕೊರವಂಜಿ ಸಿಡಿ ತಯಾರಿಕೆಯಲ್ಲಿ ರಾಮಾನುಜ ಮತ್ತು ಕೆ.ಎಲ್. ರಾಮದಾಸ್ ಅವರ ಸಹಾಯ, ಸಹಕಾರ ಅಪಾರ. ಭವನದಲ್ಲಿ ಅಪರಂಜಿ ಕಾರ್ಯಕ್ರಮ ಎಂದರೆ ಕೆ.ಎಲ್. ರಾಮದಾಸ್ ಅವರು ಇದು ಅವರದೇ ಕಾರ್ಯಕ್ರಮ ಎನ್ನುವಂತೆ ತೊಡಗಿಸಿಕೊಳ್ಳುತ್ತಿದ್ದರು. ಜೊತೆಗೆ ಉತ್ತಮವಾದ ಸಲಹೆಗಳನ್ನೂ ನೀಡುತ್ತಿದ್ದರು. ಭವನದ ಸಿಬ್ಬಂದಿಯನ್ನು ಹುರಿದುಂಬಿಸುತ್ತಿದ್ದರು. ಇನ್ನು ಭವನಕ್ಕೆ ಹೋದರಂತೂ ಅವರೊಂದಿಗೆ ಕಾಫಿ ಊಟ ಇಲ್ಲದೇ ಹಿಂದಿರುಗಿದ ದಿನಗಳೇ ಇಲ್ಲ. ಇತ್ತೀಚಿನ ಒಂದು ನಿದರ್ಶನ ಹೇಳಬೇಕು ಎಂದರೆ ಪ್ರತಿ ತಿಂಗಳೂ ಅಪರಂಜಿ ಚಂದಾದಾರರ ಪಟ್ಟಿಯನ್ನು ಪರಿಷ್ಕರಿಸುವ ಕೆಲಸದಲ್ಲಿ ನಮಗೆ ಇದ್ದ ಅಡಚಣೆಯನ್ನು ಅವರಿಗೆ ವಿವರಿಸಿದಾಗ ಅವರು ಬನ್ನಿ ಭವನದಲ್ಲಿ ನಾನು ಅದನ್ನು ಮಾಡಿಸಿಕೊಡುತ್ತೇನೆ ಎಂದು ನಮ್ಮನ್ನು ಅಲ್ಲಿಗೆ ಕರೆಸಿ ಭವನದ ಒಬ್ಬ ಸಿಬ್ಬಂದಿಗೆ ಈ ಕೆಲಸ ವಹಿಸಿದರು. ಅದು ಇಂದಿಗೂ ಸಮರ್ಪಕವಾಗಿ ನಡೆದುಕೊಂಡು ಬರುತ್ತಿದೆ. ಇದು ಕೇವಲ ಒಂದು ಉದಾಹರಣೆ. ಇಂಥವುಗಳನ್ನು ರಾಮದಾಸ್ ಮಾಡಿಕೊಂಡೇ ಬಂದಿದ್ದರು. ಇತರರ ಕಷ್ಟಗಳಿಗೆ ಸದಾ ಸ್ಪಂದಿಸಿದ ಹೃದಯ ರಾಮದಾಸರದು. ಅಪರಂಜಿ ಇರುವವರೆಗೂ ಕೆ.ಎಲ್. ರಾಮದಾಸ್ ಅವರ ನೆನಪು ಅಜರಾಮರ. ಕಂಬನಿ ತುಂಬಿದ ಕಣ್ಣುಗಳಿಂದ ಅಪರಂಜಿ ಅಗಲಿದ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾಳೆ.

# ಓ. ವಿ. ವಿಜಯನ್

**- ಶಿವಕುಮಾರ್**




ನನಗೆ ವಿಜಯನ್ ಅವರ ವ್ಯಂಗ್ಯಚಿತ್ರಗಳ ಪರಿಚಯವಾದದ್ದು ''ದ ಹಿಂದೂ'' ದಿನಪತ್ರಿಕೆಯ ಮೂಲಕ. ಅವರ ವ್ಯಂಗ್ಯಚಿತ್ರಗಳಲ್ಲಿ ಒಂದು ಅನಗತ್ಯ ರೇಖೆ ಕೂಡಾ ಕಾಣಸಿಗುತ್ತಿರಲಿಲ್ಲ. ಖ್ಯಾತ ವಿಮರ್ಶಕ ಸೆಬಾಸ್ಟಿಯನ್ ಪಾಲ್ ಅವರ ಮಾತಿನಲ್ಲಿ ಹೇಳುವುದಾದರೆ, ''ವಿಜಯನ್ ಅವರ ಗುರು ಶಂಕರ್ ಅವರ ವ್ಯಂಗ್ಯಚಿತ್ರಗಳಲ್ಲಿ ಒಂದೆರಡು ವ್ಯಕ್ತಿಗಳನ್ನು ಮಾತ್ರ ಕಾಣಬಹುದಾಗಿತ್ತು. ಹಲವೊಮ್ಮೆ ಯಾವ ವ್ಯಕ್ತಿಯೂ ಇಲ್ಲದೇ ಕೇವಲ ಇರುವೆ, ಕಾಗೆಗಳನ್ನು ಬಳಸಿ ಅವರು ತೀಕ್ಷ್ಣ ಹಾಸ್ಯವನ್ನು ಸೃಷ್ಟಿಸುತ್ತಿದ್ದರು. ಇಂದಿಗೂ ಅವರ ವ್ಯಂಗ್ಯಚಿತ್ರಗಳು ಪ್ರಸ್ತುತ. ಅವರ ಚಿತ್ರಗಳು ಹಾಸ್ಯಕ್ಕಿಂತ ಸಾಮಾನ್ಯ ಜನರ ನೋವನ್ನು ಬಿಂಬಿಸುತ್ತಿದ್ದವು.''

ಒಟ್ಟು ಪುಲಾಕ್ಕಲ್ ವೇಲುಕುಟ್ಟಿ ವಿಜಯನ್ 1930ರಲ್ಲಿ ಕೇರಳದ ಪಾಲಕ್ಕಾಡಿನಲ್ಲಿ ಹುಟ್ಟಿದರು. ಅಲ್ಲಿನ ವಿಕ್ಟೋರಿಯಾ ಕಾಲೇಜಿನಲ್ಲಿ ಪದವೀಧರರಾಗಿ, ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಿಂದ ಇಂಗ್ಲೀಷ್ ಸಾಹಿತ್ಯದಲ್ಲಿ ಮಾಸ್ಟರ್ಸ್ ಪದವಿಯನ್ನು ಗಳಿಸಿದರು.


ವಿಜಯನ್ ಅವರ ಮೊದಲ ಒಲವು ಸಾಹಿತ್ಯ..ಅವರು ತಮ್ಮ ಮಾತೃಭಾಷೆ ಮಲೆಯಾಳಂನಲ್ಲಿ ಬರೆದ ಮೊಟ್ಟಮೊದಲ ಕಾದಂಬರಿ, ''ಖಸಕ್ಕಿಂಟೆ ಇತಿಹಾಸಂ''. ಮಲೆಯಾಳಿ ಸಾಹಿತ್ಯ ಲೋಕದಲ್ಲಿ ಒಂದು ಕ್ರಾಂತಿಯನ್ನೇ ಉಂಟುಮಾಡಿತೆಂದು ಹೇಳಬಹುದು. ವಿಜಯನ್ ಒಟ್ಟು ಆರು ಕಾದಂಬರಿಗಳು, ಒಂಭತ್ತು ಸಣ್ಣಕತೆಗಳ ಸಂಕಲನ ಮತ್ತು ಒಂಭತ್ತು ಪ್ರಬಂಧ ಸಂಕಲನಗಳನ್ನು ಹೊರತಂದಿದ್ದಾರೆ.


ವಿಜಯನ್ ಅವರು ದ ಸ್ಟೇಟ್ಸ್‌ಮನ್ ಮತ್ತು ದಿ ಹಿಂದೂ ದಿನಪತ್ರಿಕೆಗಳ ಸಂಪಾದಕ ಮಂಡಳಿಯ ವ್ಯಂಗ್ಯಚಿತ್ರಕಾರರಾಗಿ ಕಾರ್ಯ ನಿರ್ವಹಿಸಿದ್ದರು.

ವಿಜಯನ್ ಅವರ ಪ್ರತಿಭೆಯನ್ನು ಗೌರವಿಸಿ ಭಾರತ ಸರ್ಕಾರ ಅವರಿಗೆ ಪದ್ಮಭೂಷಣ್ ಪ್ರಶಸ್ತಿಯನ್ನು ನೀಡಿತು. ಅದರ ಸಾಹಿತ್ಯ ಸೇವೆಗಾಗಿ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ, ಮತ್ತು ಕೇರಳ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರಕಿದವು. 2005ರಲ್ಲಿ ವಿಜಯನ್ ರವರು ಹೈದರಾಬಾದಿನಲ್ಲಿ ವಿಧಿವಶರಾದರು. ಅವರ ಅನುಕಂಪಭರಿತ ಕೊಡುಗೆ ನಾಡಿನ ಜನಮಾನಸದಲ್ಲಿ ಎಂದಿಗೂ ಹಸಿರಾಗಿರುತ್ತದೆ.


ಕ್ಯಾಬಿನೆಟ್
ರೂಮ್
ಫೈನಾನ್ಸ್
ಹೋಮ್
ರೇಲ್ವೇಸ್


Vijayan
ನಾವು ಸೋವಿಯೆಟ್ ಈಸ್ಟ್ ಇಂಡಿಯಾ ಕಂಪನಿ ಮೇಡಂ
ಭೂಮಾರ್ಗ ಹುಡುಕ್ತಾ ಇದೀವಿ !
ಆಫ್ಘಾನಿ-
ಸ್ಥಾನ್
ಪಾಕ್


ಕೈಗಾರಿಕೆಗಳ ಬೆಳವಣಿಗೆ ದ್ವಿಗುಣ
ಪರ್ ಕ್ಯಾಪಿಟ ಆದಾಯ ಏರಿಕೆ
ಅಬ್ಬ! ಪಾವರ್ಟಿ ಲೈನಿಗೂ ಬೇರರ್ ಬಾಂಡ್ ಲೈನಿಗೂ ಮಧ್ಯೆ ಅದೆಷ್ಟು ಆರ್ಥಿಕ ಬೆಳವಣಿಗೆ!


ಶ್ರೀಲಂಕಾದಲ್ಲಿ ಬದಲಾಗುತ್ತಿರುವ ಭಾರತದ ಇಮೇಜ್
ಸಂಘಮಿತ್ರ
ಗಾಂಧಿ
ರಾಜೀವ್

# ಜೆರೋಮ್ ಕೆ. ಜೆರೋಮ್(1859-1927)

- ಪಾಲಹಳ್ಳಿ ವಿಶ್ವನಾಥ್

ಇಂಗ್ಲೆಂಡಿನಲ್ಲಿ 19ನೆಯ ಶತಮಾನದಲ್ಲಿ ಹುಟ್ಟಿದ ಜೆರೋಮ್ ಬಹಳ ಬಡತನದಲ್ಲಿ ಬೆಳೆದು ವಿವಿಧ ಕೆಲಸಗಳನ್ನು ಮಾಡುತ್ತ ಜೀವ ತಳ್ಳುತ್ತಿದ್ದರು. ತನ್ನ 29ನೆಯ ವಯಸ್ಸಿನಲ್ಲಿ 'ಐಡಲ್ ಥಾಟ್ಸ್ ಆಫ್ ಐಡಲ್ ಫೆಲೊ' ಎಂಬ ಪುಸ್ತಕ ಬರೆದು ಸ್ವಲ್ಪ ಖ್ಯಾತಿಯನ್ನು ಗಳಿಸಿದರು. ಆನಂತರ ಮದುವೆಯಾಗಿ ಮಧುಚಂದ್ರವನ್ನು ಥೇಮ್ಸ್ ನದಿಯ ಮೇಲೆ ದೋಣಿಯೊಂದರಲ್ಲಿ ಕಳೆದರು. ಅದರಿಂದ ಸ್ಫೂರ್ತಿ ಬಂದು 'ತ್ರೀ ಮೆನ್ ಇನ್ ಎ ಬೋಟ್'ಎಂಬ ಪುಸ್ತಕವನ್ನು ರಚಿಸಿದ್ದು ಮೂವರು ಸ್ನೇಹಿತರು ದೋಣಿಯಲ್ಲಿ ಪ್ರಯಾಣ ಮಾಡುವುದು ಮುಖ್ಯ ಕಥಾವಸ್ತುವಾಗಿದ್ದಿತು. ಅನೇಕ ಉಪಕಥೆಗಳ ಜೊತೆ ಹಲವಾರು ತಮಾಷೆಯ ಸಂಗತಿಗಳೂ ಇದ್ದು ತಿಳಿಹಾಸ್ಯದ ಭಾಷೆಯನ್ನು ಬಳಸಿದ್ದ ಈ ಪುಸ್ತಕ ತಕ್ಷಣವೆ ಪ್ರಸಿದ್ಧಿಯಾಯಿತು. ಇದರಿಂದಾಗಿ ಥೇಮ್ಸ್ ನದಿಯಲ್ಲಿ ವಿಹಾರ ಮಾಡುವವರ ಸಂಖ್ಯೆಯೂ ಬಹಳ ಹೆಚ್ಚಾಯಿತಂತೆ. ಇದರಲ್ಲಿ ಕೆಲವು ಭಾಗಗಳು ಪಠ್ಯಪುಸ್ತಕಗಳನ್ನೂ ಸೇರಿದವು. ಅಂದಿನಿಂದ (1889) ಇಂದಿನವರೆವಿಗೂ ಈ ಪುಸ್ತಕದ ಜನಪ್ರಿಯತೆ ಕಡಿಮೆಯಾಗಿಲ್ಲ. ಇವರಿಂದ ಪ್ರಭಾವಿತರಾದವರಲ್ಲಿ ಪಿ.ಜಿ.ವುಡ್ ಹೌಸ್ ಬಹಳ ಮುಖ್ಯ.

## (1) (ಸು?)ವಾಸನೆಯ ಚೀಸಿನ ಕಥೆ

ನನ್ನ ಗೆಳೆಯನೊಬ್ಬ ಲಿವರ್ಪೂಲಿನಲ್ಲಿ ಒಳ್ಳೆಯ ಚೀಸ್ ದೊರಕುತ್ತದೆ ಎಂದುಕೊಂಡು ಐದು ಪೌಂಡ್ ಚೀಸ್ ಖರೀದಿಸಿದ. ಆಗ ನಾನು ಅಲ್ಲಿಯೇ ಇದ್ದೆ. ದೂರದಿಂದಲೇ ಸುಮಾರು ವಾಸನೆ ಬರುತ್ತಿತ್ತು. ಆಗ ಅವನು ''ನನಗೆ ಈಗ ಲಂಡನ್ನಿಗೆ ಬರೋಕೆ ಆಗೋಲ್ಲ. ಇದನ್ನು ತೆಗೆದುಕೊಂಡು ಹೋಗಿ ಮನೆಗೆ ಕೊಡ್ತೀಯ''ಎಂದು ಕೇಳಿದ. 'ಸರಿ, ಏನೂ ತೊಂದರೆಯಿಲ್ಲ' ಎಂದು ಅವನ ಮನೆಗೆ ಹೋಗಿ ಚೀಸನ್ನು ತೆಗೆದುಕೊಂಡು ರೈಲ್ವೆ ಸ್ಟೇಷನ್ನಿಗೆ ಹೋಗಲು ಒಂದು ಗಾಡಿಯಲ್ಲಿ ಕುಳಿತೆ. ಆ ಗಾಡಿಯನ್ನು ಎಳೆಯುತ್ತಿದ್ದದ್ದು ನಿದ್ದೆ ಮಾಡುತ್ತಿದ್ದ ಒಂದು ಪ್ರಾಣಿ. ಅದರ ಮಾಲೀಕ ಮಾತ್ರ ಉತ್ಸಾಹದಿಂದ ಅದನ್ನು ಕುದುರೆ ಎಂದು ಕರೆಯುತ್ತಿದ್ದ. ಹೀಗೆ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದ ಆ ಪ್ರಾಣಿಗೆ ಸ್ವಲ್ಪ ಗಾಳಿ ಬಂದು ಆ ಚೀಸಿನ ವಾಸನೆ ತಲುಪಿತು. ತಕ್ಷಣವೇ ಆ ಪ್ರಾಣಿಗೆ ನಿದ್ದೆಯಿಂದ ಎದ್ದಂತಾಗಿ ಜೋರಾಗಿ ಓಡಲಾರಂಭಿಸಿತು. ಕ್ರಮೇಣ ವೇಗ ಗಂಟೆಗೆ 4 ಮೈಲಿಗೆ ಏರಿತು. ದಾರಿಯಲ್ಲಿದ್ದ ಮುದುಕರೆಲ್ಲಾ ಓಡಲೂ

TEMPLE OF KNOWLEDGE

DISTANCE EDUCATION

(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

## CENTER OF DISTANCE LEARNING

MBA WITH 6 SPECIALIZATIONS,
MA, M.COM, MCA, MSc-BT,
PGDCS, BA & B.COM - AGE BASIS

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

ಆಗದೆ ನಿಂತಲ್ಲೆ ನಡುಗಲಾರಂಭಿಸಿದ್ದರು. ರೈಲ್ವೆ ನಿಲ್ದಾಣ ತಲಪಿದಾಗ ಕುದುರೆಯನ್ನು ಹಿಡಿದು ನಿಲ್ಲಿಸಲು ಇಬ್ಬರು ಕೂಲಿಗಳು ಬೇಕಾಯಿತು. ಅದೂ ಒಬ್ಬ ಕೂಲಿ ತನ್ನ ಮುಖದ ಮೇಲೆ ಕರ್ಚೀಫ್ ಹಾಕಿಕೊಂಡಿದ್ದ.

ಟಿಕೀಟು ಖರೀದಿ ಮಾಡಿ ಒಂದು ಕೈನಲ್ಲಿ ಚೀಸಿದ್ದ ಚೀಲವನ್ನು ಹಿಡಿದುಕೊಂಡು ಪ್ಲಾಟ್ ಫಾರಮ್ಮಿಗೆ ಹೋದೆ. ನಾನು ನಡೆಯುತ್ತಿದ್ದ ಹಾಗೆ ದಾರಿಯಲ್ಲಿ ಎರಡೂ ಕಡೆ ದಾರಿ ಬಿಡುತ್ತಿದ್ದರು; ಅವರ ಚಹರೆಯಲ್ಲಿ ಏನೋ ಗೌರವವಿದ್ದ ಹಾಗೆ ಕಾಣುತ್ತಿತ್ತು. ಆಗಲೆ ರೈಲು ತುಂಬಿದಂತಿತ್ತು. ಹಾಗೂ ಏಳು ಜನರಿದ್ದ ಒಂದು ಡಬ್ಬಿಯೊಳಗೆ ಹೋದೆ. ಒಳಗಿದ್ದ ಒಬ್ಬ ತಡೆಯಲು ಬಂದನು. ಹಾಗೂ ನಾನು ಅವನನ್ನು ತಳ್ಳಿಕೊಂಡು ಒಳಗೆ ಹೋದೆ. ಹೋಗಿ ಚೀಸಿನ ಚೀಲವನ್ನು ಮೇಲೆ ಸಾಮಾನು ಇಡುವ ಕಡೆ ಇಟ್ಟು ಕುಳಿತುಕೊಂಡು ಎಲ್ಲರ ಕಡೆಗೂ ಒಂದು ಪುಟ್ಟ ನಗೆ ಬೀರಿದೆ. ಒಂದೆರಡು ನಿಮಿಷದ ನಂತರ ಅಲ್ಲಿ ಕುಳಿತವರಲ್ಲಿ ಇಬ್ಬರು ಮೂಸಿ ನೋಡಲಾರಂಭಿಸಿದರು. ಹಾಗೇ ಮೂಸಿ ನೋಡುತ್ತಲೆ ಅವರಿಬ್ಬರೂ ಇಳಿದು ಹೋದರು. ಅನಂತರ ಅಲ್ಲಿದ್ದ ಪ್ರೌಢೆಯೊಬ್ಬರು ''ಏನಿದು ಅಸಹ್ಯ, ಒಬ್ಬ ಹೆಂಗಸಿಗೆ ಪ್ರಯಾಣಮಾಡಲು ಎಷ್ಟು ಕಷ್ಟ' ಎಂದು ಹೇಳುತ್ತ ಇಳಿದು ಹೋದರು. ಉಳಿದವರಲ್ಲಿ ಮೂವರು ಒಂದು ಕ್ಷಣ ಹಾಗೆಯೇ ಕುಳಿತಿದ್ದು ಮುಂದಿನ ಕ್ಷಣಗಳಲ್ಲಿ ಒಟ್ಟಿಗೆ ಇಳಿಯುವುದಕ್ಕೆ ಹೋಗಿ ಮಾಡಿ ಪೆಟ್ಟು ಮಾಡಿಕೊಂಡರು. ಕಡೆಗೆ ನಾನು ಮತ್ತು ಇನ್ನೊಬ್ಬ ಪಯಾಣಿಕ ಉಳಿದುಕೊಂಡೆವು. ಏನೋ ಸತ್ತ ವಾಸನೆ ಬರುತ್ತಿದೆಯಲ್ಲಾ ಎಂದು ಹೇಳುತ್ತಾ ಅದು ಮಾಮೂಲೆನ್ನುವಂತೆ ಸುಮ್ಮನಿದ್ದನು.

ಸದ್ಯ ಇಡೀ ಡಬ್ಬ ನಮಗೇ ಎಂದು ಹೇಳಿದಾಗ ಅವನು ಸಂತೋಷದಿಂದ ''ಪುಟ್ಟ ವಿಷಯಕ್ಕೆಲ್ಲಾ ಎಷ್ಟು ಫಜೀತಿ ಮಾಡಿಕೊಳ್ಳುತ್ತಾರೆ'' ಎಂದು ಉತ್ತರ ಕೊಟ್ಟ. ಸ್ವಲ್ಪ ಸಮಯದ ನಂತರ 'ವಿಸ್ಕಿ ಕುಡಿಯೋಣ' ಎಂದು ಅವನನ್ನು ಕರೆದುಕೊಂಡು ಹೋಗಿ ಒಂದು ವಿಸ್ಕಿ ಕೊಡಿಸಿದೆ. ಅದನ್ನು ಮುಗಿಸಿದ ನಂತರ ನನ್ನ ಕಡೆಯೂ ನೋಡದೆ ಅವನು ಬೇರೆ ಡಬ್ಬವನ್ನು ಹತ್ತಿದ. ನನಗೆ ಅದು ಇಷ್ಟವಾಗಲಿಲ್ಲ. ರೈಲು ತುಂಬಿದ್ದರೂ ನನ್ನ ಡಬ್ಬದಲ್ಲಿ ನಾನು ಒಬ್ಬನೇ ಇದ್ದೆ. ಪ್ರತಿ ಸ್ಟೇಶನ್ ಬಂದಾಗಲೂ ಜನ 'ಓ ಇಲ್ಲಿ ಹೋಗೋಣ. ಖಾಲಿ ಇದೆ' ಎಂದು ಕೂಗಿಕೊಂಡು ಭಾರದ ಪೆಟ್ಟಿಗೆಗಳನ್ನು ಎತ್ತುಕೊಂಡು ಓಡುತ್ತಾ ಡಬ್ಬಿಯ ಬಳಿಬಂದು 'ನಾನು ಮೊದಲು! ನಾನು ಮೊದಲು' ಎಂದು ಕಿರುಚುತ್ತಾ ಒಳಗೆ ಬರುತ್ತಿದ್ದರು. ಹಾಗೇ ಒಂದೆರಡು ಕ್ಷಣದಲ್ಲಿಯೇ ಇಳಿದು ಹೋಗುತ್ತಿದ್ದರು ಕೂಡ. ಅಂತೂ ಇಡೀ ಪ್ರಯಾಣದಲ್ಲಿ ರೈಲ್ವೆ ಡಬ್ಬದೊಳಗೆ ನಾನೊಬ್ಬನೇ ಇದ್ದೆ!

ಲಂಡನ್ನಿನಲ್ಲಿ ರೈಲಿನಿಂದ ಇಳಿದು ನೆಟ್ಟಗೆ ನನ್ನ ಗೆಳೆಯನ ಮನೆಗೆ ಹೋದೆ. ಒಳ ಹೋಗುತ್ತಲೆ ಅವನ ಹೆಂಡತಿ ''ಏನಿದು, ಏನಾಯ್ತು'' ಎಂದು ಉದ್ವಿಗ್ನಳಾಗಿ ಕೇಳಿದರು.

‘‘ಏನಿಲ್ಲ, ಇದು ಚೀಸು. ಟಾಮ್, ಲಿವರ್‌ಪೂಲಿನಲ್ಲಿ ಇದನ್ನು ಖರೀದಿಸಿದ. ನಿಮಗೆ ಕೊಡಲು ಹೇಳಿದ’’ ಎಂದೆ.

ಮೂರು ದಿನಗಳ ನಂತರ ಆಕೆ ಫೋನ್ ಮಾಡಿ,

‘‘ಈ ಚೀಸಿನ ಬಗ್ಗೆ ನಿಮ್ಮ ಗೆಳೆಯ ಏನು ಹೇಳಿದ?’’ ಎಂದು ಕೇಳಿದರು.

‘‘ಯಾರು ಮುಟ್ಟದ ಕಡೆ ಇಡಲು ಹೇಳು’’ ಎಂದಿದ್ದ,

‘‘ಸದ್ಯ! ಅದನ್ನು ಯಾರು ಮುಟ್ಟಲು ಹೋಗುತ್ತಾರೆ?...... ವಾಸನೆಯ ಬಗ್ಗೆ ಏನಾದರೂ ಹೇಳಿದ್ದರೆ?’’ ಎಂದು ಕೇಳಿದಾಗ ‘‘ಅವನಿಗೆ ಬಹಳ ಇಷ್ಟವಾದಂತಿತ್ತು’’ ಎಂದೆ.

‘‘ಯಾರಿಗಾದರೂ ಸ್ವಲ್ಪ ದುಡ್ಡು ಕೊಟ್ಟು ಅದನ್ನು ತೆಗೆದುಕೊಂಡು ಹೋಗಲು ಹೇಳಿದರೆ ಅವರಿಗೆ ಬೇಜಾರಾಗುತ್ತದೆಯೇ?’’

‘‘ಹೌದು. ಅವನು ಮುಂದೆ ಮಾತೇ ಆಡದೆ ಇರಬಹುದು’’ ಎಂದೆ

‘‘ನೀವೇ ಅದನ್ನು ಇಟ್ಟುಕೊಳ್ಳುತ್ತೀರಾ? ನಿಮ್ಮ ಮನೆಗೆ ಕಳಿಸಿಕೊಡುತ್ತೇನೆ.’’ ಎಂದರು.

ಅದಕ್ಕೆ ನಾನು ‘‘ನೋಡೀಮ್ಮ ನನಗೆ ಚೀಸ್ ಏನೋ ಇಷ್ಟ. ಆಂದಿನ ರೈಲ್ವೆ ಪ್ರಯಾಣವನ್ನು ನಾನು ನನ್ನ ಜನ್ಮದಲ್ಲಿ ಎಂದೂ ಮರೆಯುವುದಿಲ್ಲ. ಬಹಳ ಸುಖಕರ ಪ್ರಯಾಣ. ಆದರೆ ಈ ಪ್ರಪಂಚದಲ್ಲಿ ನಾವು ಇತರರ ಬಗ್ಗೆಯೂ ಯೋಚಿಸಬೇಕಲ್ಲವೆ? ನನ್ನ ಲ್ಯಾಂಡ್ ಲೇಡಿ ವಿಧವೆ, ಅವರಿಗೆ ಜೀವನದಲ್ಲಿ ಯಾರೂ ಇಲ್ಲ. ಅಂಥವರಿಗೆ ನಿಮ್ಮ ಗಂಡನ ಚೀಸಿನಿಂದ ಉಂಟಾಗುವ ಕಷ್ಟಗಳನ್ನು ನಾನು ಊಹಿಸಿಕೊಳ್ಳಲಾರೆ’’ ಎಂದೆ.

‘‘ಸರಿ, ಹಾಗಾದರೆ ನಾನು ಮಕ್ಕಳನ್ನು ಕರೆದುಕೊಂಡು ಒಂದು ಹೋಟೇಲಿನಲ್ಲಿ ಹೋಗಿರುತ್ತೀನಿ. ಆ ಚೀಸು ಖರ್ಚಾಗುವ ತನಕ ನಾನು ಬರುವುದಿಲ್ಲ, ಆ ಚೀಸಿನ ಜೊತೆ ನಾನು ಬಾಳಲಾರೆ’’ ಎಂದರು.

ಹೆಂಡತಿ ಮತ್ತು ಮಕ್ಕಳು ಹೋಟೆಲಿನಲ್ಲಿ ಅನೇಕ ದಿನಗಳನ್ನು ಕಳೆದು ಖರ್ಚು ಹೆಚ್ಚಾಗಲು ಶುರುವಾದಾಗ ನನ್ನ ಗೆಳೆಯ ‘ನನಗೆ ಚೀಸ್ ಏನೋ ಇಷ್ಟ. ಅದರೆ ಇದು ದುಬಾರಿಯಾಗುತ್ತಿದೆ’ ಎಂದು ಅದನ್ನು ತೆಗೆದುಕೊಂಡು ಹೋಗಿ ಥೇಮ್ಸ್ ನದಿಯಲ್ಲಿ ಬಿಸಾಕಿದನು. ಆದರೆ ಅದನ್ನು ನೋಡಿದ ಕಾವಲುಗಾರರು ಅವನನ್ನು ವಾಪಸ್ಸು ತೆಗೆದುಕೊಂಡು ಹೋಗಲು ಹೇಳಿದರು. ಆ ಚೀಸಿಗೋಸ್ಕರ ಅವನು ಬೆಸ್ತರ ತರಹ ನೀರಿನಲ್ಲಿ ಹುಡುಕಾಡಬೇಕಾಯಿತು. ಕಡೆಗೂ ಸಮುದ್ರ ತೀರದ ಒಂದು ಚಿಕ್ಕ ಪಟ್ಟಣಕ್ಕೆ ಹೋಗಿ ಅದನ್ನು ಮರಳಿನ ಕೆಳಗೆ ಹೂತು ಬಂದನು. ಆನಂತರ ಆ ಪುಟ್ಟ ಪಟ್ಟಣಕ್ಕೆ ಬಂದವರೆಲ್ಲಾ ‘ಏನೋ ವಾಸನೆಯಿದೆಯಲ್ಲಾ’ ಎನ್ನುತ್ತಿದ್ದರು. ಕಡೆಗೆ ‘ಖಾಯಿಲೆ ಇರುವವರಿಗೆ ಒಳ್ಳೆಯ ವಾಸನೆಯ ಊರು’ ಎಂದು ಆ ಪಟ್ಟಣ ಹೆಸರು ಪಡೆಯಿತು.

# (2) ಹೀಗೆ ಹೋಗಿ ಬಂದು ಬಿಡೋಣ

(ಹ್ಯಾಂಪ್ಟನ್ ಮೇಸ್ ಇಂಗ್ಲೆಂಡಿನ ಹಳೆಯ (12ನೆಯ ಶತಮಾನದ) ಕಾಲದ ಖ್ಯಾತ ತೋಟ. ಒಳಗೆ ಹೋದರೆ ಹೊರಗೆ ಬರುವುದು ಕಷ್ಟ, ದಿಗ್ಭ್ರಮೆ ಹಿಡಿಸುವಂತಹ ಜಾಲ)

ಒಂದು ಬಾರಿ ಹ್ಯಾರಿಸ್ ಹ್ಯಾಂಪ್ಟನ್ ಜಾಲದ ಬಳಿ ಹೋದಾಗ 'ತನ್ನ ಕಸಿನ್‌ಗೆ' ಇದೇನು ಮಹಾ! ಏನು ಹೊಗಳಿಕೊಳ್ತಾರೋ ಇದನ್ನ! ಬರೀ ಬಲಕ್ಕೆ ತಿರುಗುತ್ತಿದ್ದರೆ ಆಯ್ತು. ಅಷ್ಟೇ ಬಾ! ಹೀಗೆ ಹೋಗಿ ಹಾಗೆ ಬಂದು ಬಿಡೋಣ ಎಂದ ಅವನನ್ನು ಕರೆದುಕೊಂಡು ಒಳಗೆ ಹೋದ ಕೆಲವು ನಿಮಿಷಗಳ ನಂತರ ಕೆಲವು ಜನ ಕಾಣಿಸಿದರು. ''ನಾವು ಮುಕ್ಕಾಲು ಗಂಟೆಯಿಂದ ಇಲ್ಲೇ ಇದ್ದೀವಿ, ಸಾಕಾಗ್ತಿದೆ'' ಎಂದರು. ಹ್ಯಾರಿಸ್ ''ನಿಮಗೆ ಬೇಕಾದರೆ ನನ್ನ ಜೊತೆ ಬರಬಹುದು. ಹೀಗೇ ಹೋಗಿ ಬಂದುಬಿಡೋಣ'' ಎಂದು. ಅವರು ಧನ್ಯವಾದಗಳನ್ನು ಅರ್ಪಿಸುತ್ತಾ ಅವನ ಹಿಂದೆ ನಡೆಯಲು ಷುರು ಮಾಡಿದರು. ಹಾಗೇ ಇನ್ನೂ ಕೆಲವು ಜನ ಅವರನ್ನು ಸೇರಿಕೊಂಡರು. ಒಟ್ಟಿನಲ್ಲಿ ಒಳಗೆ ಹೋಗಿದ್ದವರೆಲ್ಲಾ ಈಗ ಹ್ಯಾರಿಸ್ ಮುಖಂಡತ್ವದಲ್ಲಿ ನಡೆಯುತ್ತಿದ್ದರು. ಮನೆ ಮಠ ಸೇರಿ ಹತ್ತಿರದವರನ್ನು ನೋಡುವ ಆಸೆಯನ್ನೆಲ್ಲಾ ಬಿಟ್ಟಿದ್ದ ಆ ಜನ ಹ್ಯಾರಿಸ್ ನನ್ನು ಹೊಗಳಿದರು. ಹ್ಯಾರಿಸ್ ಪ್ರಕಾರ ಅವನ ಜೊತೆ ಸುಮಾರು ಇಪ್ಪತ್ತು ಜನರಿದ್ದರು. ಮಗುವನ್ನು ಇಟ್ಟುಕೊಂಡಿದ್ದ ಒಬ್ಬ ಚಿಕ್ಕ ವಯಸ್ಸಿನ ಮಹಿಳೆ ಕೂಡ ಇದ್ದು ಅವನನ್ನ ಆಪದ್ಬಾಂಧವನ ತರಹ ನೋಡಿದಳು.

ಹ್ಯಾರಿಸ್ ಬಲಕ್ಕೆ ದಾರಿ ಸಿಕ್ಕಲ್ಲೆಲ್ಲ ತಿರುಗುತ್ತಲೇ ಇದ್ದ. ಅವನ ಕಸಿನ್ ''ಈ ಜಾಲ ದೊಡ್ಡದಿರಬೇಕು'' ಎಂದಾಗ ಹ್ಯಾರಿಸ್ 'ಹೌದು, ಯುರೋಪಿನ ದೊಡ್ಡ ಜಾಲಗಳಲ್ಲಿ ಇದೂ ಒಂದು' ಎಂದ. 'ಇರಬೇಕು ಆಗಲೆ ನಾವು ಎರಡು ಮೈಲಿ ಆಗಲೇ ನಡೆದಿದ್ದೇವೆ' ಎಂದ ಅವನ ಕಸಿನ್. ಹಿಂದೆ ನೋಡಿದ ಸ್ಥಳಕ್ಕೇ ಮೂರನೆಯ ಬಾರಿ ವಾಪಸ್ ಬಂದಾಗ ಮಗುವಿದ್ದ ಮಹಿಳೆ ಹ್ಯಾರಿಸ್‌ನನ್ನು 'ನೀನು ಮೋಸಗಾರ' ಎಂದು ನಿಂದಿಸಿದಳು. ಹ್ಯಾರಿಸ್‌ಗೆ ಕೋಪ ಬಂದು 'ನೋಡಿ ಇಲ್ಲಿ! ನಕ್ಷೆ ಇದೆ'. ಎಂದು ತೋರಿಸಿದ ''ಅದೆಲ್ಲ ಸರಿ, ಆದರೆ ನಕ್ಷೆಯಲ್ಲಿ ಎಲ್ಲಿದ್ದೀರ ಎಂದು ನಿಮಗೆ ಗೊತ್ತಾ''? ಎಂದು ಒಬ್ಬ ಕೇಳಿದ್ದಕ್ಕೆ ಹ್ಯಾರಿಸ್ ಬಳಿ ಉತ್ತರವಿರಲಿಲ್ಲ.

ಕೆಲವು ನಿಮಿಷಗಳ ನಂತರ ''ಒಳಗೆ ಬಂದ ಜಾಗಕ್ಕೆ ಹೋಗಿ ಮತ್ತೆ ಷುರು ಮಾಡುವುದು ಒಳ್ಳೆಯದು'' ಎಂದು ಹ್ಯಾರಿಸ್ ಹೇಳಿದ. ಎಲ್ಲರೂ ಒಪ್ಪಿ ಹ್ಯಾರಿಸ್ನ ಹಿಂದೆ ಮತ್ತೆ ಹೊರಟರು. ಹಲವಾರು ನಿಮಿಷಗಳ ನಂತರ ಮಧ್ಯ ಭಾಗಕ್ಕೆ ಬಂದು ಸೇರಿದರು. ''ಇಲ್ಲೇ ಬರಬೇಕು ಅಂತಿದ್ದೆ'' ಎಂದು ಹೇಳೋಣ ಎಂದುಕೊಂಡ ಹ್ಯಾರಿಸ್ ಗುಂಪಿನ ಚಹರೆಯನ್ನೋಡಿ ''ಇದು ಆಕಸ್ಮಿಕ'' ಎಂದ. ಸರಿ, ಮತ್ತೆ ಷುರು ಮಾಡೋಣ ಎಂದು ಎಲ್ಲರೂ ಹೊರಟರು. ಆದರೆ ಹಲವಾರು ನಿಮಿಷಗಳ ನಂತರ ಎಲ್ಲರೂ ಮತ್ತೆ ಮಧ್ಯಕ್ಕೆ ಬಂದರು. ಅನಂತರ ಅವರಿಗೆ ಬೇರೆ ಎಲ್ಲೂ ಹೋಗಲು ಆಗಲಿಲ್ಲ, ಯಾವ ಕಡೆ

ಹೊರಟರೂ ಮಧ್ಯಕ್ಕೇ ಬರುತ್ತಿದ್ದರು. ಇದು ಬಹಳ ಬಾರಿ ನಡೆದ ನಂತರ ಕೆಲವರು ಅಲ್ಲೇ ಇದ್ದು ಹೋದ ಜನ ವಾಪಸ್ಸು ಬರಲಿ ಎಂದು ಕಾದು ನಿಂತರು! ಮತ್ತೆ ಹ್ಯಾರಿಸ್ ತನ್ನ ನಕ್ಷೆಯನ್ನು ಹೊರ ತೆಗೆದಾಗ ಗುಂಪಿಗೆ ಬಹಳ ಕೋಪ ಬಂದು ''ನೀನೋ ನಿನ್ನ ನಕ್ಷೆಯೋ'' ಎಂದು ಬಯ್ದರು. ಅಂತೂ ತಾನು ತನ್ನ ಜನಪ್ರಿಯತೆಯನ್ನು ಕಳೆದುಕೊಳ್ಳುತ್ತಿದ್ದೇನೆ ಎಂದು ಹ್ಯಾರಿಸ್‌ಗೆ ಅನಿಸಿತು.

ಕಡೆಗೆ ಎಲ್ಲರೂ ಹುಚ್ಚರಂತಾಗಿದ್ದು ಜೋರಾಗಿ ಅಲ್ಲಿಯ ಕಾವಲುಗಾರನಿಗೆ ಕೂಗಿದರು. ಅದನ್ನು ಕೇಳಿಸಿಕೊಂಡು ಅವನು ಒಂದು ಏಣಿಯನ್ನು ಹತ್ತಿ ಹೊರಗೆ ಬರಲು ಅವರಿಗೆ ದಾರಿಯನ್ನು ಹೇಳಿಕೊಟ್ಟ. ಆದರೆ ಬರೀ ಗೊಂದಲದಲ್ಲೇ ಇದ್ದ ಆ ಜನ ಅವನ ಮಾತುಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಆದಕ್ಕೆ ಅವನು 'ಅಲ್ಲೇ ಇರಿ, ನಾನೇ ಬರುತ್ತೇನೆ' ಎಂದು ಹೇಳಿದ. ಆದರೆ ಅವನೂ ಹೊಸಬನಾಗಿದ್ದು ಸ್ವಲ್ಪ ಹೊತ್ತಿನ ನಂತರ ಅವನು ಕೂಡ ದಾರಿ ತಪ್ಪಿದ. ಒಮ್ಮೊಮ್ಮೆ ಅವರು ಇವನನ್ನು ನೋಡುವುದು ಅಥವಾ ಅವನು ಇವರನ್ನು ನೋಡುವುದು. ಆದರೆ ಅವರನ್ನು ಅವನು ಸಂಧಿಸಲೇ ಇಲ್ಲ. ಕಡೆಗೂ ಹಳೆಯ ಕಾವಲುಗಾರ ಬರುವವರೆವಿಗೂ ಅವರೆಲ್ಲ ಕಾಯಬೇಕಾಯಿತು.

## ನಾಣ್ಣುಡಿಗಳ ತಿರುಚು

| | | |
|---|---|---|
| 1 | ಹೆಲ್ತ್ ಈಸ್ ವೆಲ್ತ್ | ವೆಲ್ತಿ ಹ್ಯಾಬಿಟ್ಸ್ ಬೆಳೆಸಿಕೊಳ್ಳಿ |
| 2 | ಆಲ್ಕೋಹಾಲ್ ಈಸ್ ಸ್ಲೋ ಪಾಯ್ಸನ್ | ನಾನೇನೂ ತರಾತುರಿಯಲ್ಲಿಲ್ಲ |
| 3 | ಸತ್ಯ ಕಹಿ ಬಿಯರ್ ಕೂಡ ಕಹಿ | ನಾನು ಸತ್ಯ ಬಿಟ್ಟಿರಲಾರೆ |
| 4 | ಎ ಸ್ಟಿಚ್ ಇನ್ ಟೈಮ್ ಸೇವ್ಸ್ ನೈನ್ | ಇಲ್ಲದಿದ್ದರೆ ಫ್ಯಾಷನ್ ಸ್ಟೇಟ್‌ಮೆಂಟ್ ಆಗುತ್ತೆ! |
| 5 | ಲವ್ ಈಸ್ ಬ್ಲೈಂಡ್ | ಅದಕ್ಕೆ ಅಲ್ಲವೇ ಪ್ರೇಮಿಗಳು ಬ್ರೈಲ್‌ಸಿಸ್ಟಮ್ ಅನುಸರಿಸುವುದು? |
| 6 | ಅರ್ಲಿ ಬರ್ಡ್ ಗೆಟ್ಸ್ ದಿ ವರ್ಮ್ | ಪಾಪ ಅರ್ಲಿ ವರ್ಮ್ ಬಗ್ಗೆ ಯೋಚಿಸಿ |
| 7 | ದೇರ್ ಈಸ್ ನೊ ಸಬ್ಸ್ಟಿಟ್ಯೂಟ್ ಫಾರ್ ಮನಿ | ಯಾರು ನೋಡ್ತಿದಾರೆ ಅಂತೀನಿ? |
| 8 | ಕೀಪ್ ಗುಡ್ ಕಂಪನಿ ಅಂಡ್ ಬಿ ಒನ್ ಆಫ್ ದೆಮ್ | ಹೇಗೆ? ಅವರೂ ಅದೇ ನಿರೀಕ್ಷಿಸುತ್ತಾರೆ ಅಲ್ಲವೇ? |
| 9 | ಆಲ್ ಗುಡ್ ಥಿಂಗ್ಸ್ ಮಸ್ಟ್ ಕಮ್ ಟು ಎನ್ ಎಂಡ್ | ಬ್ರಹ್ಮಚರ್ಯ? |

ನಂನಾಗ್ರಾಜ್

# ಮುಂದಿನ ಸರ್ಕಾರದ(ಗಳ) ಯೋಜ(–ಚ–)ನೆಗಳು ಹೀಗಿರಬಹುದೆ?

**ಎಚ್.ಆರ್. ಹನುಮಂತರಾವ್**

1. (ನಾಯಕನ) ಗೆಲುವಿಗಾಗಿ ಪಕ್ಷದ ಸಭೆಗಳಲ್ಲಿ ಕೈಎತ್ತಿ, ಜೈಕಾರ ಮಾಡುವವರಿಗೆ ಮನೆಗೇ ಮಧ್ಯಾಹ್ನದ ಉಚಿತ ಊಟ–ಬಿರ್ಯಾನಿ ಮತ್ತು ಎಲೆ ಅಡಿಕೆ ಸರಬರಾಜು. ಸಂಜೆಗೆ–ಅದನ್ನ ಪಬ್ಲಿಕ್ಕಾಗಿ ಹೇಳಲಿಕ್ಕಾಗದು.
2. (ನಾಯಕನ) ಪಕ್ಷಕ್ಕೆ ಜೈಕಾರ ಹಾಕಿ, ಟೀವಿ ಮಾಧ್ಯಮಗಳ ಮುಂದೆ ಅತ್ತು ಅತ್ತು, ಕಣ್ಣೀರು ಸುರಿಸುವ ಮಂದಿಗೆ ಉಚಿತ ಗ್ಲಿಸರೀನ್ ಬಾಟಲಿ, ಇಲ್ಲವೆ ಅಮೃತಾಂಜನದ ಡಬ್ಬಿ, ಟವೆಲ್, ಹೆಂಗಸರಿಗೆ ವಾರಕ್ಕೊಂದು ಹೊಸ ನೈಲಾನ್ ಸೀರೆ ಹಾಗು ಗಂಡಸರಿಗೆ ದಟ್ಟಿ ಪಂಚೆ.
3. ಫುಟ್ ಪಾತ್‌ನಲ್ಲಿ ಪಕ್ಷದ ಚಿನ್ಹೆ ಹಿಡಿದು ಪಕ್ಷದ ಪ್ರಣಾಲಿಕೆ ಪ್ರದರ್ಶಿಸುವವರಿಗೆ ಉಚಿತ ಗುಡಿಸಲು ನಿರ್ಮಾಣಕ್ಕೆ ಎರಡು ಜಿಂಕ್ ಷೀಟ್ ಮತ್ತು ಒಲೆ ಉಚಿತ.
4. ಪಕ್ಷದ ಚಿನ್ಹೆ ಹೊತ್ತು ಹಳ್ಳಿ ಹಳ್ಳಿಯಲ್ಲಿ ಹೋಗಿಬರುವ ರೈತರಿಗೆ ಉಚಿತ ನೇಗಿಲು ಇಲ್ಲವೆ ಜೋಡಿ ಎತ್ತು. ಸಾಗುವಳಿ ಮಾಡುವ ದೊಡ್ಡ ದೊಡ್ಡ ರೈತಾಪಿ ಮಂದಿಗೆ ಕೈತುಂಬಾ ಕೇಳಿದಷ್ಟು ಹಣ–ಅದಕ್ಕೆ ಸಾಲವೂ ಇಲ್ಲ, ಬಡ್ಡಿ ಸುದ್ದಿಯಂತೂ ಇರುವುದೇ ಇಲ್ಲ–ಅಂದರೆ ಹಿಂದಿರುಗಿ ಕೊಡುವ ಪ್ರಮೇಯವೇ ಇಲ್ಲ. ಹಿಂತಿರುಗಿಸಲೂ ಬಾರದು(ಅನಕೌಂಟೆಡ್ ಮನಿಯಾ ಎಂದು ಬಾಯಿ ತಪ್ಪಿಯೂ ಕೇಳಬಾರದು).
5. ತಮ್ಮ ಪಕ್ಷಕ್ಕೇ ಓಟು ಹಾಕುವ, ಪಟ್ಟಣದಲ್ಲಿ ಹುಟ್ಟಿ, ಬೆಳೆದು ಇಲ್ಲವೆ ಮನೆ ಕಟ್ಟಿಕೊಂಡ ಮಂದಿಗೆ ಒಂದು ವರ್ಷದವರೆಗೆ ಬಸ್ಸು, ಕಾರು (ಯಾರದೆಂದು ಸರ್ಕಾರ ಗೆದ್ದಾಗ ತಿಳಿಸುವುದು)ಗಳಲ್ಲಿ ಉಚಿತ ಪಾಸ್ ಕೊಟ್ಟು ಓಡಾಟಕ್ಕೆ ಸುಲಭ.
6. ಸರ್ಕಾರದ ಗುತ್ತಿಗೆ ಹಿಡಿದು ರಸ್ತೆ ಡಾಂಬರೀಕರಣ, ಹಳ್ಳತಿಟ್ಟುಗಳ ಸಮ ಮಾಡುವ ಸಣ್ಣಸಣ್ಣ ಕಂಟ್ರಾಕ್ಟರುಗಳಿಗೆ ರೋಡ್ ಇಂಜಿನ್, ಸಿಮೆಂಟ್, ಮರಳು ಜಮೈಕದಿಂದಲೋ, ಇಂಡೊನೇಷ್ಯಾದಿಂದಲೋ ಒಟ್ಟಿನಲ್ಲಿ ಎಲ್ಲಿಂದ ಬಂದರೂ ಅವುಗಳ ಬಾಡಿಗೆ, ಖರ್ಚು ಶೇ.50% ಹಣ ಸರ್ಕಾರದ ಜವಾಬ್ದಾರಿ.
7. ಸರ್ಕಾರಿ ನೌಕರರಿಗೆ ಉಚಿತವಾಗಿ ಮನೆಗೇ ಒಂದು ವರ್ಷಕ್ಕಾಗುವಷ್ಟು ಆಹಾರ ಧಾನ್ಯ, ಒಬ್ಬ ಮಗನಿಗೆ ಪಲ್ಸರ್ ಮೊಟರು ಬೈಕು, ಒಬ್ಬ ಮಗಳಿಗೆ ಯಾವುದೇ ಸ್ಕೂಲು, ಕಾಲೇಜಗಳಲ್ಲಿ ಡೊನೇಷನ್ನ್, ಫೀಸ್ ಇತ್ಯಾದಿ ಕಟ್ಟುವ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದು. ಡಿಗ್ರಿ ಪಾಸಾದ ಮಕ್ಕಳ ವಿದೇಶ ವ್ಯಾಸಂಗಕ್ಕೆ ಸರ್ಕಾರ ಅರ್ಧ ಭಾಗ ಖರ್ಚು.

8. ಖಾಯಿಲೆ ಬಿದ್ದು ಕೊನೆಯ ತನಕ ನರಳುವ ರೋಗಿಗಳಿಗೆ ಉಚಿತ ನರ್ಸ್ ಸೇವೆ, ಹಾಗೂ ಬದುಕುಳಿದವರಿಗೆ ಉಚಿತ ಹಾಸಿಗೆ, ಹೊದಿಕೆ ವರ್ಷಕ್ಕೊಂದು ಬಾರಿ.

9. ವಯೋ ವೃದ್ಧರಿಗೆ ಆಯುಸ್ಸು ಮುಗಿದಾಗ ಸರ್ಕಾರದ ಖರ್ಚಿನಲ್ಲೇ ಅಂತಿಮ ಸಂಸ್ಕಾರ. ಶ್ರಾದ್ಧ ಕರ್ಮ ಮಾಡಿಸುವವನಿಗೆ ಘಂಟೆ, ಆ ದಿನದ ಸಂಭಾವನೆ ಸರ್ಕಾರದಿಂದ.

10. ಹೆರುವ (ಹೆಣ್ಣು) ಮಕ್ಕಳಿಗೆ ಶಿಶು ಹುಟ್ಟುವ ವೇಳೆ ಏನು ಸೇವೆ ಸರ್ಕಾರ ಮಾಡಬೇಕೆಂಬುದು ಇನ್ನು ನಿರ್ಧರಿತವಾಗಿಲ್ಲ. ಮನೆಯಿಂದ ಆಸ್ಪತ್ರೆಗೆ, ಅಲ್ಲಿಂದ ತಿರುಗಿ ಮನೆಗೆ ಉಚಿತ ವಾಹನ ಸೌಲಭ್ಯವಂತೂ ಖಚಿತ. ಶಿಶು ಬದುಕುಳಿದರೆ ಖಂಡಿತ ತೊಟ್ಟಿಲು ಉಚಿತ. ತೀರಿಕೊಂಡರೆ ಗರ್ಭಪಾತ ಮಾಡಿಸಿದ ಸೂಲಗಿತ್ತಿಗೆ ಒಂದು ವಾರ ರಜದ ಮೇಲೆ ಅಕೆಯ ಹನಿಮೂನ್‌ಗೆ ಸರ್ಕಾರದ ಅನುಮತಿ.

11. ನಿವೃತ್ತ ಸರ್ಕಾರಿ ನೌಕರರಿಗೆ ಕೊನೆಯ ಸಲ ಆಫೀಸಿನಿಂದ ಮನೆಗೆ ಬರುವಾಗ ಸಕಲ ಸರ್ಕಾರೀ ಗೌರವದೊಂದಿಗೆ, ಓಲಗ, ಬ್ಯಾಂಡ್, ದೊಂಬರ ಕುಣಿತ, ನಾಲ್ಕು ಕುದುರೆ ಬಂಡಿಯ ಸಾರೋಟ್ನಲ್ಲಿ ಮೆರವಣಿಗೆ, ಉಚಿತ ಮೈಸೂರು ಪೇಟ ಹಾಗು ಕೈಗೆ ಕೋಲು. ಸಾಕುವ ಅಭಿಲಾಷೆಯಿದ್ದರೆ ನಾಯಿ ಮರಿಯೂ ಉಚಿತ.

12. ಮದುವೆಯಾಗಬೇಕೆಂದು ಜಪಿಸುವ ಹೆಣ್ಣುಗಳಿಗೆ ಉಚಿತ ವರ ಸರ್ಕಾರದ ವತಿಯಿಂದ. ಅಂದರೆ ಸರ್ಕಾರವೇ ವರದಕ್ಷಿಣೆಯನ್ನ ನಿರ್ಧರಿಸುತ್ತದೆ. ಮದುವೆ ಬಯಸುವ ಹುಡುಗರಾದರೆ ಹೆಣ್ಣು ಮಕ್ಕಳ ಸ್ಕೂಲು ಯಾ ಕಾಲೇಜುಗಳ ಮುಂದೆ ಸರದಿಯಲ್ಲಿ ನಿಂತು ತಾವೇ ಬಯಸುವ ಹುಡುಗಿಯರೊಡನೆ ವಿಚಾರಿಸಿಕೊಳ್ಳುವದಕ್ಕೆ ವಿಶೇಷ ಸವಲತ್ತು ಶಾಲೆಯ ಕಾಲೇಜು ಅಧ್ಯಾಪಕರ ಸಮ್ಮುಖದಲ್ಲಿ.

## ಆಗ ಹಿಡಿದ ನಡುಕ

ಎಚ್.ಕೆ. ರಂಗನಾಥ್ ಅವರು ಒಮ್ಮೆ ಬೆಟಗೇರಿ ಕೃಷ್ಣಶರ್ಮರವರನ್ನು ಭೇಟಿ ಮಾಡಲು ಹೋದರು. ಬೆಟಗೇರಿಯವರಿಗೆ ಆಗ ಅರವತ್ತರ ಪ್ರಾಯ. ಕೈ ಕಾಲು ಮೈಯೆಲ್ಲಾ ಸಣ್ಣಗೆ ನಡುಗುತ್ತಿತ್ತಂತೆ. ಇದನ್ನು ಗಮನಿಸಿದ ರಂಗನಾಥ್‌ರವರು ಏಕೆ ಹೀಗೆ ನಡುಗುತ್ತಿದ್ದೀರಲ್ಲ ಇದಕ್ಕೇನು ಔಷಧಿ ಮಾಡಿಕೊಳ್ಳಲಿಲ್ಲವೇ ಎಂದು ಕೇಳಿದಾಗ ಕೃಷ್ಣಶರ್ಮರು ಅಯ್ಯೋ ಕೇಳಿ ರಂಗನಾಥ್, ಇದು ಇಂದು ನೆನ್ನೆಯದಲ್ಲ ನನ್ನ ಮದುವೆಯ ಸಂದರ್ಭದಲ್ಲಿ ಅಂತರ ಪಟ ಕಳಚಿ ಮೊದಲ ಬಾರಿ ಇವಳನ್ನು ನೋಡಿದಾಗ ಪ್ರಾರಂಭವಾದ ಈ ನಡುಕ. ಇದಕ್ಕೆಲ್ಲಿಯಾದರೂ ಮದ್ದುಂಟೇ ಎಂದು ಕೇಕೆ ಹಾಕಿ ನಕ್ಕರಂತೆ

ಋಣ: ಎಚ್.ಕೆ ರಂಗನಾಥ್ ಅವರ 'ನೆನೆದವರು ಮನದಲ್ಲಿ'

ಸಂಗ್ರಹ ; ವೈ.ಎನ್.ಗುಂಡೂರಾವ್

**RAMAIAH**
**Indic Specialty Ayurveda**

**RESTORATION HOSPITAL**

# Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para- Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

# World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

**ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.**

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA ON MODERN METHODS OF ANALYSIS FOR FOOD / DRUG / ENVIRONMENT FOR GRADUATES & POST-GRADUATES IN SCIENCE, ENGG, PHARMACY, BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಮರವೆ

**- ಸಿ.ಆರ್.ಸತ್ಯ**

ಇತ್ತೀಚೆಗೆ ನಮಗೆ ಅಸಾಧ್ಯ ಮರವೆ ಇರೋದರಿಂದ ಮರವೆ ಸ್ಪೆಶಲಿಸ್ಟ್ ಡಾಕ್ಟರ ಹತ್ತಿರ ಹೋದೆ. ಅಲ್ಲಿ ನಮ್ಮಿಬ್ಬರ ನಡುವೆ ಆದ ಸಂಭಾಷಣೆ ಹೀಗಿತ್ತು:

''ನಮಸ್ಕಾರ ಡಾಕ್ಟರೇ. ನನ್ನ ಹೆಸರು ಕೆಂಪಣ್ಣಯ್ಯ ಅಂತ-''

''ನಿಮ್ಮ ಹೆಸರು ಆಮೇಲೆ ಆಗಲಿ. ಏನಾಗಿದೆ ನಿಮಗೆ?''

''ವಿಪರೀತ ಮರವೆ ಡಾಕ್ಟ್ರೆ. ಎಲ್ಲಾ ಮರತು ಹೋಗ್ತಾ ಇದೆ''

''ಎಲ್ಲಾ ಅಂದರೆ ಏನು? ಏನಾದರೂ ಲಿಸ್ಟ್ ಮಾಡ್ಕೊಂಡು ಬಂದಿದ್ದೀರಾ?''

''ಮಾಡಿದ್ದೆ. ತರೋದು ಮರೆತುಬ್ಟೆ ಡಾಕ್ಟ್ರೆ. ಅದೇ ಅಲ್ವಾ ನನ್ನ ಪ್ರಾಬ್ಲಮ್ಮು?''

''ನೋಡಿ ಸಂಗಣ್ಣಯ್ಯನವರೆ-''

''ಡಾಕ್ಟ್ರೆ, ನಾನು ಸಂಗಣ್ಣಯ್ಯ ಅಲ್ಲ. ನಾನು..ಓ, ನನ್ನ ಹೆಸರೇ ಜ್ಞಾಪಕ ಬರ್ತಿಲ್ಲ. ಹಾ! ಗುಂಡಣ್ಣಯ್ಯಾ ಅಂತ..''

''ಯಾವುದೋ ಅಣ್ಣಯ್ಯ ಬಿಡಿ. ಅಲ್ರೀ ಮಂಗಣ್ಣಯ್ಯ, ಹೆಂಡತೀ ಹೆಸರಾದ್ರೂ ಜ್ಞಾಪಕ ಇದ್ಯೇನ್ರೀ?''

''ಹೆಂಡ್ತೀದೇ..? ಯಾರು, ನನ್ನ ಹೆಂಡ್ತೀದೇ..?''

''ಇಲ್ಲ, ನನ್ನ ಹೆಂಡ್ತೀದು ಕೇಳ್ತಿದೀನಿ ಅಂತ ಅಂದ್ಕೊಂಡ್ರೇನ್ರೀ, ನಿಮ್ಮ ಹೆಂಡ್ತೀದೂ?''

''ನನಗೆ ಹೆಂಡ್ತಿ ಇರೋದು ಜ್ಞಾಪಕ ಇದೆ ಡಾಕ್ಟ್ರೆ. ಆದರೆ ಅವಳ ಹೆಸರು.....''

''ಹೋಗ್ಲಿ ಬಿಡಿ ಪೆಂಗಣ್ಣಯ್ಯ. ನನಗೂ ನನ್ನ ಹೆಂಡತಿ ಹೆಸರು ಜ್ಞಾಪಕ ಇಲ್ಲ. ಇದೆಲ್ಲಾ ವಯಸ್ಸಾದಮೇಲೆ ಆಗೋದೇ.

ಆದರೂ ಹೆಂಡತಿ ಹೆಸರನ್ನೇ ಮರೆತರೆ ಅದಕ್ಕೆ ನಾವು ನಿಮ್ಮನ್ನು ಸ್ಟೇಜ್ ತ್ರೀ ಪೇಶೆಂಟ್ ಅಂತ ಕರೀಬೇಕಾಗುತ್ತೆ.''

''ಹಾಗಂದ್ರೆ ಏನು ಡಾಕ್ಟ್ರೆ? ನನ್ನ ತಲೆ ಆಪರೇಶನ್ ಆಗ್ಬೇಕೇ. ಸೀರಿಯಸ್ಸೇ?''

''ಆಪರೇಶನ್ ಮಾಡೋಕ್ಕೆ ನಿಮ್ಮ ತಲೇಲಿ ಹೇಳ್ಕೋಳ್ಳೋ ಅಂಥಾದ್ದು ಏನಿಲ್ಲ ಬಿಡಿ. ಆದರೆ ಹೊರಗಿನಿಂದಲೇ ನೋಡಿದರೆ, ನಿಮ್ಮ ತಲೇಲಿ ಒಂದು ಪಾರ್ಟ್ ಇದೆ. ಅದರ ಹೆಸರು...ಹೆಸರು.. ಮರತುಹೋಗಿದೆ. ಅದು ಮುಂದಿನಿಂದ ಹಿಂದಕ್ಕೆ ತಿರುಗಿಕೊಂಡಿರೋ ಹಾಗಿದೆ. ಈಗ ಅದನ್ನ ವಾಪಸ್ಸು ತಿರುಗಿಸಬೇಕು ಅಷ್ಟೆ''

''ಇದಕ್ಕೆ ಏನಾದರೂ ಟಾಯ್ಲೆಟ್ಗಳಿಂದ.. ಅಯ್ಯೋ ಸಾರೀ.. ಏನಾದರೂ ಟ್ಯಾಬ್ಲೆಟ್‌ಗಳಿಂದ ವಾಸಿ ಮಾಡೋಕ್ಕೆ ಆಗಲ್ವೇ ಡಾಕ್ಟ್ರೆ?''

''ಆಗುತ್ತೆ. ನೋಡಿ, ಪುಟ್ಟಣ್ಣಯ್ಯನವರೆ, ಪ್ರಾಬ್ಲಮ್ ಅದಲ್ಲ. ನನಗೆ ಆ ಟ್ಯಾಬ್ಲೆಟ್ ಹೆಸರು ಮರತುಹೋಗಿದೆ. ತಕ್ಷಣ ಬರೆದುಕೊಡೋಕ್ಕೆ ಆಗೊಲ್ಲ.''

''ಮತ್ತೇನು ಮಾಡಲಿ ಡಾಕ್ಟ್ರೇ?''

''ಒಂದು ಕೆಲಸ ಮಾಡಿ. ಬನ್ನಿ ಇಲ್ಲಿ ಮಲಗಿಕೊಳ್ಳಿ. ನರ್ಸ್! ನರ್ಸ್!! ಆ...ಇದು...ಇದು.... ಹಾ, ಪುಟ್ಟ ಸೈಜ಼್ ಸುತ್ತಿ ತಗೊಂಡು ಬನ್ನಿ. ಹಾ. ಥ್ಯಾಂಕ್ಸ್. ಕುಂಟಣ್ಣಯ್ಯನವರೆ, ಈಗ ನಿಮ್ಮ ತಲೇನ ಮೆಲ್ಲಗೆ ಕುಟ್ಟಿ ನೋಡ್ತೀನಿ. ಕೂಗಾಡಬೇಡಿ. ಹಾಗೆ.... ಗುಡ್,ವೆರಿ ಗುಡ್..''

''ಯಾಕೋ ತಬಲ ಬಾರಿಸಿದ ಹಾಗೆ ಶಬ್ದ ಬರ್ತಾಯಿದೆಯಲ್ಲಾ ಡಾಕ್ಟ್ರೆ?''

''ಅದು ನಿಮ್ಮ ತಲೆ ಭಾಗ..ಅ..ಅ..ಅ. ಹೆಸರು ಮರತಿದೀನಿ.. ಅದು ಟೊಳ್ಳು ಇರೋ ಹಾಗಿದೆ, ಅಷ್ಟೆ ವರಿ ಮಾಡ್ಕೋಬೇಡಿ. ನನಗೂ ಇದೇ ಜಾಗದಲ್ಲೇ ತಲೇಲಿ ಟೊಳ್ಳು ಇದೆ. ಎಲ್ಲಿ ಈ ಪಕ್ಕಕ್ಕೆ ತಿರುಗಿ.. ಹಾ, ಈಗ ಹೇಗಿದೆ ಶಬ್ದ?''

''ಮೃದಂಗ ಬಾರಿಸ್ದಾಗೆ ಇದೆ ಡಾಕ್ಟ್ರೆ.''

''ಅಂದರೆ, ಅಲ್ಲಿ ಲೋಕಲ್ ಆಗಿ ನಿಮಗೆ ಸ್ವಲ್ಪ... ಲಿವರ್ ಮಾಸ್.. ಅಲ್ಲ, ಅಲ್ಲ ಬ್ರೈನ್ ಮಾಸ್ ಇದೇ ಅಂತ ಆಯ್ತು. ಒಳ್ಳೇದೆ. ಅಂದರೆ ನಿಮಗೆ ಸ್ವಲ್ಪನಾದ್ರೂ ಜ್ಞಾಪಕ ಶಕ್ತಿ ಇರಬಹುದು ಅಂತ ಅರ್ಥ. ನೀವು ಹುಟ್ಟಿದ್ದು ಯಾವಾಗ ಹೇಳಿ?''

''ಮರತು ಹೋಗಿದೆ ಡಾಕ್ಟ್ರೆ.ಕಳೆದ ಶತಮಾನದಲ್ಲಿ ಅಂತ ಜ್ಞಾಪಕ...''

''ಹಾಗಂದರೆ ಏನ್ರೀ? ಆಗ ಮಹಾಭಾರತ ಯುದ್ಧ ನಡೀತಿತ್ತೆ?''

''ಛೇ, ಛೇ, ಮೊದಲ್ನೇದೋ ಎರಡ್ನೇದೋ ವರ್ಲ್ಡ್ ವಾರ್ ಆಗ್ತಿತ್ತು ಅಂತ ಜ್ಞಾಪಕ ಡಾಕ್ಟ್ರೆ''

''ಹಾಗಾದ್ರೆ ಈಗ ನಿಮಗೆ ಸಾವಿರಾರು ವರುಷಗಳು ಆಗಿರಬೇಕು. ಸಾಧ್ಯ ಇಲ್ಲ. ಯಾಕೇಂದ್ರೆ, ನೋಡೋಕ್ಕೆ ಇನ್ನೂ ಚಿಕ್ಕವರಾಗಿ ಕಾಣಿಸ್ತಿದೀರ. ಅದೂ ಅಲ್ಲದೆ ನನಗೆ ಜ್ಞಾಪಕ ಇರೋ ಹಾಗೆ, ಎರಡು ವರ್ಲ್ಡ್ ವಾರ್‌ಗಳು ಆಗಿದ್ದು, ವಿಜಯನಗರ ಸಾಮ್ರಾಜ್ಯ ಬೀಳೋಕ್ಕೆ ಮುಂಚೆ. ಡೋಸೇಜ್ ಅಡ್ಜಸ್ಟ್ ಮಾಡೋಕ್ಕೆ ನಿಮ್ಮ ವಯಸ್ಸು ಎಷ್ಟು ಅಂತ ಕೇಳಿದರೆ ಅಷ್ಟೆ. ಒಂದು ಕೆಲಸ ಮಾಡ್ತೀನಿ. ಒಂದು ಟ್ಯಾಬ್ಲೆಟ್‌ನ ಬರೆದು ಕೊಡ್ತೀನಿ. ಅದನ್ನ ದಿನಕ್ಕೆ ಒಂದು ಸಲ ಹದಿನೈದು ದಿನಗಳು ಕಾಲ ತಗೊಂಡು, ನನ್ನನ್ನ ಇನ್ನೊಂದು ಸಲ ಬಂದು ನೋಡಿ. ನಮ್ಮ ಆಸ್ಪತ್ರೆ ರೂಲ್ಸ್ ಪ್ರಕಾರ ಈಗಲೇ ಇಲ್ಲಿ ನರ್ಸ್ ಕೈಲಿ ಇನ್ನೂರು ರೂಪಾಯಿ ಕೊಟ್ಟು ಆಮೇಲೆ ನನ್ನ ಪ್ರಿಸ್ಕ್ರಿಪ್ಷನ್ ತೊಗೊಳ್ಳಿ''

''ಯಾಕೆ ಡಾಕ್ಟ್ರೆ ಅಡ್ವಾನ್ಸ್ ಆಗಿ ದುಡ್ಡು ಕೊಡಬೇಕೇ?''

''ನೋಡ್ರೀ, ಮಂಗಣ್ಣಯ್ಯನವರೆ, ಇಲ್ಲಿ ಬರೋ ಪೇಶೆಂಟ್‌ಗಳೆಲ್ಲಾ ದುಡ್ಡು ಕೊಡೋಕ್ಕೆ ಮರತು ಬಿಟ್ಟು ಹೊರಟು ಹೋಗ್ತಾರೆ, ಅದಕ್ಕೇ!... ನರ್ಸ್! ಎಲ್ಲಿದೀರಾ..ನರ್ಸ್. ನೋಡಿ, ಈ ವೆಂಕಣ್ಣಯ್ಯನವರ ಹತ್ತಿರ 200 ರೂಪಾಯಿ ತಗೊಂಡು ರಸೀತಿ ಕೊಡಿ. ಹಾಗೇ ಆ ಪ್ರಿಸ್ಕ್ರಿಪ್ಷನ್ ಪ್ಯಾಡ್ ಕೊಡಿ, ಥ್ಯಾಂಕ್ಸ್, ನರ್ಸ್, ನಾನು ತೊಗೊಳ್ಳೋ ಟ್ಯಾಬ್ಲೆಟ್ ಹೆಸರು ಜ್ಞಾಪಕ ಇದ್ದರೆ ಹೇಳಿ. ಏನು, ನೀವೂ ಮರತು ಬಿಟ್ರಾ ಅದೇರೀ, ಅದೆಂತಾದೋ..... ಬೂಸ್ಟ್ ಅನ್ನೋ ಟ್ಯಾಬ್ಲೆಟ್ ತೊಗೋತೀನಲ್ಲ, ಅದು... ಅದು...''

''ಮೆಮೋರಿ ಬೂಸ್ಟ್ ಟ್ಯಾಬ್ಲೆಟ್ಟಾ ಡಾಕ್ಟ್ರೇ? ಪೇಪರ್‌ನಲ್ಲಿ ದಪ್ಪ ತಲೆ ಇರೋ ಒಬ್ಬನ್ನ ಜಾಹೀರಾತಿನಲ್ಲಿ ನೋಡಿದ ಜ್ಞಾಪಕ...''

''ಅದಲ್ಲಾ ರೀ. ಎಂತದ್ದೋ ಬೂಸ್ಟ್, ಹೇಗಿದ್ರೂ ನೀವು ಹದಿನೈದು ದಿವಸ ಬಿಟ್ಟು ಬರ್ತೀರಲ್ಲ, ಆಗ ಜ್ಞಾಪಿಸ್ಕೊಂಡು ಆ ಟ್ಯಾಬ್ಲೆಟ್ ಹೆಸರು ಬರೆದುಕೊಡ್ತೀನಿ. ಅಲ್ಲಿ ತನಕ ಒಂದು ಕೆಲಸ ಮಾಡಿ. ದಿನಕ್ಕೆ ಒಂದು ಸಲ ಬೂಸ್ಟ್ ಡ್ರಿಂಕ್ ಕುಡಿದು ಬಿಡಿ ಸಾಕು.''

''ಯಾವ ಬೂಸ್ಟ್ ಡ್ರಿಂಕು ಡಾಕ್ಟ್ರೆ? ಅದೇ, ಸಚ್ಚಿನ್ ದೇವ್, ಕಪಿಲ್ ತೆಂಡೂಲ್ಕರ್ ಎಲ್ಲಾ ಕುಡಿದು ಅವರ ಬೈಸೆಪ್ಸ್ ತೋರಿಸ್ತಾರಲ್ಲಾ, ಆ ಬೂಸ್ಟೇ...?''

''ಅದೇ, ಅದೇ, ಹಲೋ ನರ್ಸ್, ಬೂಸ್ಟ್‌ನ ಸ್ಪೆಲ್ಲಿಂಗ್ ಹೇಳಿ. ಓ! ನೀವು ಮರತು ಬಿಟ್ಟೀದೀರಾ? ನೋಡಿ, ಸಂಕಣ್ಣಯ್ಯನವರೇ, ಸಧ್ಯಕ್ಕೆ, ಬಿ ಯೂ, ಯೂ, ಎಸ್, ಟೀ ಅಂತ ಬರೆದು ಕೊಟ್ಟಿದೀನಿ. ಮುಂದಿನ ಸಲ ಬಂದಾಗ ಅದನ್ನ ಸರಿಯಾಗಿ ಬರೆದು ಕೊಡ್ತೀನಿ, ಆಯ್ತಾ? ಇನ್ನು ನೀವು ಹೊರಡಿ.''

''ಥ್ಯಾಂಕ್ಯೂ ಡಾಕ್ಟರ್!''

ಏನು, ಈಗ ನನ್ನ ಮರವು ವಾಸಿ ಆಯ್ತೇ ಅಂತ ಕೇಳಿದ್ರಾ? ಇಲ್ಲ, ಆಮೇಲೆ ನಾನು ನೋಡಿದ ಡಾಕ್ಟರ್‌ನ ಸಸ್ಪೆಂಡ್ ಮಾಡಿದ್ರಂತೆ. ಈಗ ಅದೇ ಆಸ್ಪತ್ರೇನಲ್ಲೇ, ನಾನೂ ಅವರೂ ಔಟ್ ಪೇಶೆಂಟ್‌ಗಳಾಗಿ ಅಕ್ಕ ಪಕ್ಕದ ಕುರ್ಚಿಗಳಲ್ಲೇ ಕೂತ್ಕೊಂಡು ಒಬ್ಬ ಹೊಸ ಡಾಕ್ಟರ್ ಹತ್ತಿರ ಕನ್ ಸಲ್ಟೇಶನ್‌ಗೆ ಕಾಯ್ತಾ ಇದೀವಿ. ''ನಾನು ಜ್ಞಾಪಕ ಇದೆಯೇ ಡಾಕ್ಟ್ರೇ?'' ಅಂತ ಕೇಳಿದೆ. ''ನನಗೇ ನಾನು ಜ್ಞಾಪಕ ಇಲ್ಲ ಇನ್ನು ನೀವೆಲ್ಲಿ ಜ್ಞಾಪಕಕ್ಕೆ ಬರ್ತೀರೀ?'' ಅಂತ ನನ್ನ ಬೈದರು. ಅದೇ ನರ್ಸ್ ನಮ್ಮನ್ನ ನೋಡಿಕೋತಿರೋದು. ಆಸ್ಪತ್ರೆ ರೂಲ್ಸ್ ಪ್ರಕಾರ ಅಡ್ವಾನ್ಸ್ ಪೇಮೆಂಟ್ ಅಂತೂ ಮಾಡಿದೀವಿ.

## ಹೋಗುವುದೆಲ್ಲಿಗೆ

ಇಬ್ಬರು ಹಿರಿಯ ನಾಗರಿಕರು ಬಸ್ ಸ್ಟಾಪ್‌ನಲ್ಲಿ ನಿಂತಿದ್ದರು. ಒಬ್ಬರು ಇನ್ನೊಬ್ಬರನ್ನು ನೋಡಿ ನಾನು ಎಲ್ಲಿಗೆ ಹೊರಟಿದೀನಿ ಅಂತ ಹೇಳ್ತೀರಾ ಅಂತ ಕೇಳಿದರು. ಅದಕ್ಕೆ ಇನ್ನೊಬ್ಬರು ಅಯ್ಯೋ ನನಗೇನು ಗೊತ್ತು ಅಂದರು. ಮತ್ತೆ ಅವರು ಹೌದು ನಾನು ಇಲ್ಲಿ ಏಕೆ ನಿಂತಿದ್ದೀನಿ ಅಂತ ಕೇಳಿದರು. ಒಬ್ಬರ ಮುಖವನ್ನೊಬ್ಬರು ನೋಡಿದರು. ಎದುರಿಗೆ ಕಾಣುವ ಹೋಟೆಲಿನ ಕಡೆ ನೋಡಿ ಬನ್ನಿ ಅಲ್ಲಿ ಒಂದು ಕಪ್ ಕಾಫಿ ಕುಡಿಯೋಣ ಅಂದು ಇಬ್ಬರೂ ಹೊರಟರು. ಹಾಗೆ ಹೊರಟವರಲ್ಲಿ ಒಬ್ಬರು ಹಾಗೇ ನಿಂತು ಅಯ್ಯೋ ನನ್ನ ಹೆಂಡ್ತಿ ಉದ್ದಿನಬೇಳೆ ತಗೊಂಡ್ ಬನ್ನಿ ಇವತ್ತು ವಡೆ ಮಾಡ್ತೀನಿ ಅಂದಿದ್ಲು ಅಂದರು. ನಿಮಗೆ ಹೇಗೆ ತಕ್ಷಣ ನೆನಪಿಗೆ ಬಂತು ಅಂತ ಕೇಳಿದರೆ ನೋಡಿ ಆ ಹುಡುಗಿ ಕಿವಿಗೆ ಅಷ್ಟು ದೊಡ್ಡ ರಿಂಗ್ ಹಾಕಿಕೊಂಡಿದ್ದಾಳಲ್ಲ ಅದನ್ನು ನೋಡಿ ನನಗೆ ಒಡೆ ನೆನಪಿಗೆ ಬಂತು ಅಂದವರೇ ಪ್ರಾವಿಷನ್ ಸ್ಟೋರ್ ಕಡೆ ಹೊರಟೇಬಿಟ್ಟರು.

# ಮೊಬೈಲ್ ದಡ್ಡತನ

– ಗಾಯತ್ರಿ ಮೂರ್ತಿ

ಇತ್ತೀಚೆಗೆ ನಾನು ಕಂಡಂತೆ ಸ್ಮಾರ್ಟ್ ಫೋನ್ ಇಲ್ಲದವರೇ ಪಾಪಿಗಳು ಎಂಬಂತಾಗಿದೆ. ಮೂರು ವರ್ಷದ ಹಿಂದಿನವರೆಗೂ ನಾನು ಈ ಸ್ಮಾರ್ಟ್ ಫೋನ್ ಹಿಡಿತಕ್ಕೆ ಸಿಗದೆ ಹಾಯಾಗಿದ್ದೆ. ನನ್ನ ಹುಟ್ಟುಹಬ್ಬಕ್ಕೆ ಸ್ಮಾರ್ಟ್ ಫೋನ್ ತಂದ್ಕೊಡ್ತೀನಿ ಅಂತ ನನ್ನ ಮಗ ಸೊಸೆ ಹೇಳಿದರು. ನಾನು ಹೇಳಿದೆ, 'ನಾನು ಸ್ಮಾರ್ಟ್ ಫೋನ್ ಉಪಯೋಗಿಸೋ ಅಷ್ಟು ಸ್ಮಾರ್ಟ್ ಅಲ್ಲ, ಖಂಡಿತ ನನ್ನ ಹತ್ರ ಇರೋ ಫೋನ್ ಚೆನ್ನಾಗಿದೆ. ನೀವು ಹೊಸ ಫೋನ್ ತರ್ಬೇಡಿ' ಎಂದು. ಆದರೆ ಅವರು ಕೇಳಬೇಕಲ್ಲ.

ಅಂತೂ ನನ್ನ ಹುಟ್ಟುಹಬ್ಬದ ದಿನ ಸ್ಮಾರ್ಟ್ ಆಗಿರೋ ಸ್ಮಾರ್ಟ್ ಫೋನ್ ನನ್ನ ಕೈಸೇರಿತು. ಅಂದಿನಿಂದ ಶುರು ನೋಡಿ, ಅದು ತಾನು ನನಗಿಂತ ಸ್ಮಾರ್ಟ್ ಅಂತ ಹೆಜ್ಜೆ ಹೆಜ್ಜೆಗೂ ನಿರೂಪಿಸುತ್ತಾ ನನ್ನನ್ನು ಗುಗ್ಗು ಮಾಡೋದರಲ್ಲಿ ಸಂತೋಷ ಪಡತ್ತೆ.

ಅಲಾರಂ ಇಡೋದರಿಂದಲೇ ನನಗೆ ಅದರ ಕಿರುಕುಳ ಆರಂಭ! ಮೊದಲು ನನ್ನ ಹಳೆಯ ಮೊಬೈಲ್‌ನಲ್ಲಿ ಸುಲಭವಾಗಿ ಅಲಾರಂ ಇಡ್ತಿದ್ದೆ. ಇದರಲ್ಲೋ ಅಲಾರಂ ಇಡೋದೇ ಒಂದು ಕಷ್ಟ ಅನ್ನಿಸ್ತು. ಹೇಗೋ ಅಲಾರಂ ಫೋನ್ ಇಟ್ಟು ಮಲಗಿದೆ. ಅಲಾರಂ ಶಬ್ದಕ್ಕೆ ನನಗೆ ಎಚ್ಚರ ಆಗದಿದ್ರೂ ನನ್ನ ಗಂಡನಿಗೆ ಸರ್ರನೆ ಎಚ್ಚರ ಆಗತ್ತೆ. ಅವರು, 'ಅಷ್ಟು ಹೊತ್ತಿನಿಂದ ಅಲಾರಂ ಹೊಡ್ಕೊತಾ ಇದೆ. ಆರಿಸಬಾರ್ದಾ?' ಎಂದು ಗೊಣಗಿದರು. ಅವರ ಗೊಣಗಾಟಕ್ಕಂತೂ ಎಚ್ಚರವಾಗಿ ಅಲಾರಂ ನಿಲ್ಲಸೋಣ ಅಂತ ನನ್ನ ಸ್ಮಾರ್ಟ್ ಮೊಬೈಲ್ ಕೈಗೆತ್ತಿಕೊಂಡು ನೋಡಿದ್ರೇsss.., ನಿದ್ದೆ ಕಣ್ಣಲ್ಲಿ ಹೇಗೆ ಅಂತಲೇ ಗೊತ್ತಾಗಲಿಲ್ಲ! ನಾನು ಫೋನ್ ಪಕ್ಕದಲ್ಲಿನ ಬಟನ್ ಪ್ರೆಸ್ ಮಾಡ್ದೆ, ಉಹೂಂ, ಪ್ರಯೋಜನವಾಗಲಿಲ್ಲ. ಅಂತೂ ಕೊನೆಗೆ ಅದಕ್ಕೇ ಬೇಸರವಾಗಿ ಹೊಡ್ಕೊಳೋದು ನಿಲ್ಲಿಸ್ತೂನ್ನಿ. ಆಮೇಲೆ ಸ್ವಲ್ಪ ದಿನ ಅಲಾರಂ ಇಡೋ ಸಾಹಸ ಮಾಡಲಿಲ್ಲ. ಅಲ್ಲಾ, ನಿದ್ದೆ ಕಣ್ಣಲ್ಲಿ ಫೋನ್ ಪರದೆ ಮೇಲೆ ಸ್ನೂಜ಼್ ಮತ್ತು ಡಿಸ್ಮಿಸ್ ಆಪ್ಷನ್ ಇರೋದು ಕಣ್ಣಿಗೇ ಬಿದ್ದಿರಲಿಲ್ಲ!!! ನನ್ನ ಮಗನನ್ನೋ ಇಲ್ಲವೇ ಸೊಸೆಯನ್ನೋ ಕೇಳಲು ಸಂಕೋಚ. ಆಮೇಲೆ ಒಬ್ಬಳೇ ಇರೋವಾಗ ಅದನ್ನು ತಿಳ್ಕೊಂಡೆ ಅನ್ನಿ.

ಅಂದು ಗಣೇಶನ ಹಬ್ಬ. ಎಲ್ಲ ಕಲಾಪಗಳೂ ಮುಗಿದು ಮಲಗುವ ವೇಳೆಗೆ ಹನ್ನೆರಡು ಗಂಟೆಯಾಗಿತ್ತು. ಮಲಗಿ ಇನ್ನೇನು ಕಣ್ಣಿಗೆ ನಿದ್ದೆ ಹತ್ತಬೇಕು, ಅಷ್ಟರಲ್ಲಿ ನನ್ನ ಸ್ಮಾರ್ಟ್ ಫೋನ್ ರಿಂಗಣಿಸಿತು. ಅರೆ, ಇಷ್ಟು ಹೊತ್ತಿನಲ್ಲಿ ನನಗೆ ಫೋನ್ ಮಾಡೋರು ಯಾರು? ಎಂದು ಸ್ವಲ್ಪ ಅಂಜುತ್ತಲೇ ಫೋನ್ ಕೈಯಲ್ಲಿ ಹಿಡಿದು ನೋಡಿದೆ. ಸ್ಮಾರ್ಟ್ ಫೋನ್ ಪರದೆಯ ಮೇಲೆ ನನ್ನ ತವರು ಮನೆಯ ಫೋನ್ ನಂಬರ್ ರಾರಾಜಿಸುತ್ತಿತ್ತು. ಏನಪ್ಪಾ, ಇಷ್ಟು ಹೊತ್ನಲ್ಲಿ ಯಾವತ್ತೂ

ಫೋನ್ ಮಾಡೋಲ್ಲವಲ್ಲ, ಯಾಕಿರಬಹುದು ಎಂದು ಅನುಮಾನಿಸುತ್ತಲೇ ಫೋನ್‌ಕಾಲ್‌ಗೆ ಉತ್ತರಿಸಿದೆ. ಅತ್ತಣಿಂದ ನನ್ನ ತಮ್ಮನ ಮಗನ ಧ್ವನಿ, 'ಆಂಟಿ, ಏನ್ಸಮಾಚಾರ, ಫೋನ್ ಮಾಡಿದ್ರಿ? ಎಲ್ಲರೂ ಚೆನ್ನಾಗಿದಾರೆ ತಾನೇ?' ಎಂದು ಕೇಳಿದ. 'ಅರೆ, ನಾನು ಫೋನ್ ಮಾಡಿಲ್ವೋ? ಬೇರೆ ಯಾರದೋ ಇರ್ಬೇಕು ನೋಡು,' ಅಂದೆ. 'ಇಲ್ಲಾ ಆಂಟಿ, ಇದೇ ನಂಬರ್‌ನಿಂದ ಫೋನ್ ಬಂತು. ನಾವು ನಿದ್ದೆಯಿಂದ ಎದ್ದು ತೊಗೊಳ್ಳೊದರಲ್ಲಿ ಆಫ್ ಆಗಿತ್ತು. ಏನು ಸಮಾಚಾರನೋಂತ ಅಜ್ಜಿ, ಅಪ್ಪ ಎಲ್ಲಾ ಆತಂಕ ಪಟ್ಕೊಂಡ್ರು. ಅದಕ್ಕೇ ಫೋನ್ ಮಾಡ್ದೆ,' ಅಂದ.

ನಾನು, 'ನೋಡೋ, ನಾನು ಖಂಡಿತ ಫೋನ್ ಮಾಡ್ಲಿಲ್ಲ. ಅಂತಹ ಸಂಗತಿ ಏನೂ ಇಲ್ಲ. ನನ್ನ ಫೋನ್‌ಗೆ ಎಲ್ಲೋ ನಿನ್ನ ಸ್ವೀಟ್ ವಾಯ್ಸ್ ಕೇಳ್ಬೇಕೂಂತನ್ನಿಸ್ತೇನೋ? ಅದಕ್ಕೆ ತಂತಾನೇ ತೀರ್ಮಾನ ತೊಗೊಂಡು ಫೋನ್ ಮಾಡಿದೆ,' ಅಂದೆ.

'ಆಂಟಿ, ನೀವು ಯಾವಾಗ್ಲೂ ತಮಾಷೆ ಮಾಡ್ತಿರಾ. ಅಜ್ಜಿ ಗಾಬರಿ ಪಟ್ಕೊಂಡಿದಾರೆ. ಅವರಿಗೆ ಹಲೋ ಹೇಳ್ಬಿಡಿ,' ಎಂದು ಫೋನ್ ನನ್ನ ತಾಯಿಯ ಕೈಗಿತ್ತ. ಅಮ್ಮನಿಗೆ 'ಇದೆಲ್ಲಾ ನನ್ನ ಫೋನ್ ಕಿತಾಪತಿ, ನಾನು ಖಂಡಿತಾ ಫೋನ್ ಮಾಡ್ಲಿಲ್ಲ. ಹಬ್ಬ ಎಲ್ಲಾ ಚೆನ್ನಾಗಾಯ್ತು. ನಾವೆಲ್ಲಾ ಆರಾಮವಾಗಿದೀವಿ. ನೀನು ಹಾಯಾಗಿ ನಿದ್ದೆ ಮಾಡು,' ಎಂದು ಗುಡ್ ನೈಟ್ ಹೇಳಿ ಫೋನ್‌ಇಟ್ಟು ಮಲಗಿದೆ. ಫೋನ್ ಟೇಬಲ್ ಮೇಲಿಟ್ಟು, ನೀರು ತರಲು ಅಡುಗೆ ಮನೆಗೆ ಹೋಗಿದ್ದಾಗ ಅದ್ಯಾವ ಮಾಯದಲ್ಲಿ ಹೀಗಾಯಿತೋ ಇಂದಿಗೂ ಅದು ಚಿದಂಬರ ರಹಸ್ಯವೇ!!!

ಆದರೆ ಮರುದಿನ ನಾನೇ ಫೋನ್ ಮಾಡಿ ವಿಚಾರಿಸಿದಾಗ, ಗಾಬರಿಗೊಂಡಿದ್ದ ನನ್ನಮ್ಮ ನಂತರ ನಿದ್ದೆ ಬರದೆ ರಾತ್ರಿಯೆಲ್ಲಾ ಪರದಾಡಿದರಂತೆ.

ಇನ್ನೊಮ್ಮೆ ನನ್ನ ಸ್ಮಾರ್ಟ್ ಫೋನ್ ಹನ್ನೊಂದು ಗಂಟೆಯಲ್ಲಿ ಹಿರಿಯ ಲೇಖಕರೊಬ್ಬರಿಗೆ ಫೋನ್ ಮಾಡಿತ್ತು! ಪುಣ್ಯಕ್ಕೆ ಅವರು ಫೋನ್ ಎತ್ತಲಿಲ್ಲ. ಎತ್ತಿದ್ದರೂ ನಾನು ನನ್ನ ಫೋನ್ ಕೈಯಲ್ಲಿಟ್ಟುಕೊಂಡಿರಲಿಲ್ಲ! ಮರುದಿನ ಅವರು ಫೋನ್ ಮಾಡಿ, 'ರಾತ್ರಿ ಏಕೆ ಫೋನ್ ಮಾಡಿದ್ರಿ? ಮತ್ತೆ ಫೋನ್ ಯಾಕೆ ಉತ್ತರಿಸಲಿಲ್ಲ?' ಎಂದು ಕೇಳಿದರು.

'ಇದೆಲ್ಲಾ ನನ್ನ ಸ್ಮಾರ್ಟ್ ಫೋನ್ ಕಿತಾಪತಿ. ಅದರ ಪರವಾಗಿ ನಾನು ಕ್ಷಮೆ ಕೇಳ್ತೀನಿ,' ಎಂದು ನನ್ನ ಫೋನ್ ಮಾಡುವ ಘನ ಕಾರ್ಯದ ಬಗ್ಗೆ ವಿವರಿಸಿದೆ. ಅವರು ನಕ್ಕು ಸುಮ್ಮನಾದರು. ಆದರೂ ಅಂದು ಅದು ನನ್ನನ್ನು ಗೇಲಿಗೊಡ್ಡಿದ್ದು ಮರೆಯಲಾರೆ.

ಇತ್ತೀಚೆಗೆ ಅದು ಮತ್ತೊಂದು ರೀತಿ ಕಿತಾಪತಿ ಮಾಡ್ತಿದೆ. ಹೆಸರುಗಳು ಮತ್ತು ಫೋನ್ ನಂಬರ್‌ಗಳನ್ನು ತನಗೆ ಇಚ್ಚೆ ಬಂದಂತೆ ಅದಲು ಬದಲು ಮಾಡಿ ನನ್ನನ್ನು ಕಾಡಿಸುತ್ತಿದೆ. ಒಮ್ಮೆ ನನ್ನ ಫೋನ್ ರಿಂಗಣಿಸಿದಾಗ ನನ್ನ ತಂಗಿ ಗೀತಾಳ ಹೆಸರು ಕಾಣಿಸಿತು. ಸರಿ, ನಾನು ಫೋನ್‌ನಲ್ಲಿ ಅತ್ಯಂತ ಆತ್ಮೀಯತೆಯಿಂದ 'ಹಾಯ್, ಗೀತೂ, ಚೆನ್ನಾಗಿದೀಯೇನೇ?' ಎಂದು ಕೇಳಿದೆ. ಅತ್ತಣಿಂದ, 'ಮ್ಯಾಮ್, ನಾನು ಸರಸ್ವತಿ, ಗೀತಾ ಅಲ್ಲ' ಎಂಬ ಸರಸ್ವತಿಯ

ಧ್ವನಿ ಕೇಳಿ, 'ಅಯ್ಯೋ, ಇದೇನು? ನನ್ನ ಫೋನ್ ಗೀತಾ ಅಂತ ತೋರಿಸ್ತು,' ಎಂದು ಅಚ್ಚರಿಗೊಳ್ಳುತ್ತ ಅವಳೊಂದಿಗೆ ಮಾತನಾಡಿದೆ.

ಇನ್ನೊಮ್ಮೆ ನನ್ನ ಫೋನ್‌ನಲ್ಲಿ ನಮ್ಮ ಲೇಖಕಿಯರ ಸಂಘದ ಅಧ್ಯಕ್ಷರ ಹೆಸರು ಕಾಣಿಸಿತು. 'ನಮಸ್ಕಾರ ಮೇಡಂ' ಎಂದೆ ಗೌರವದಿಂದ. 'ನಾನು ಮೇಡಂ ಅಲ್ವೇ. ನಿನ್ನ ತಮ್ಮ ಶ್ರೀನಿವಾಸ,' ಅತ್ತಣಿಂದ ನನ್ನ ತಮ್ಮ ನಗುತ್ತ ಹೇಳಿದ. 'ಅಯ್ಯೋ ಮತ್ತೆ ನನ್ನ ಕಲೇಸಂ ಅಧ್ಯಕ್ಷರ ಹೆಸರು ಕಾಣಿಸ್ತು, ಅದಕ್ಕೇ ನಮಸ್ಕಾರ ಅಂದೆ,' ಎಂದು ಸಮಜಾಯಿಷಿ ಹೇಳಿದೆ. ಅಂದಿನಿಂದ ಹಲೋ, ಎಂದಷ್ಟೇ ಹೇಳಿ ಫೋನ್ ಮಾಡ್ತಿರೋರು ಯಾರು ಎಂದು ಸರಿಯಾಗಿ ತಿಳಿದ ನಂತರ ಮಾತನಾಡತೊಡಗಿದೆ. ನನಗೋ ಫೋನ್ ನಂಬರ್‌ಗಳು ನೆನಪಿನಲ್ಲಿರುವುದಿಲ್ಲ. ಆದ್ದರಿಂದಲೇ ಇರಬೇಕು, ನನ್ನ ಸ್ಮಾರ್ಟ್ ಫೋನ್‌ಗೆ ಇಂತಹ ಖಯಾಲಿ ಬಂದು ನನ್ನನ್ನು ಹೀಗೆ ಕಾಡಿಸತೊಡಗಿತು.

ಯಾಕೋ ಸರಿಯಿಲ್ಲ, ಎಂದು ಮೊಬೈಲ್ ಬದಲಿಸಿದೆ. ಆದರೆ ಮೊಬೈಲ್ ಸರಿಯಾಗಿದೆ, ಸಮಸ್ಯೆ ಇರೋದು ಮೊಬೈಲ್‌ನಲ್ಲಿ ಅಲ್ಲ ಎಂಬ ಸತ್ಯಅರಿವಾಗಲು ಬಹಳದಿನ ಬೇಕಾಗಲಿಲ್ಲ.

ಇತ್ತೀಚೆಗೆ ನನ್ನ ಸ್ಮಾರ್ಟ್ ಫೋನ್ ಮತ್ತೊಂದು ರೀತಿಯ ಅವಾಂತರ ಮಾಡಿ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸಿತು. ಮೆಸೇಜ್‌ಟೈಪ್ ಮಾಡುವಾಗ ಅದರ ಕೆಳಗೆ ಹಲವಾರು ಆಯ್ಕೆಗಳನ್ನು ತೋರಿಸುವುದು ಸರಿಯಷ್ಟೆ. ನಾನು ಸರಿಯಾಗಿ ಟೈಪ್ ಮಾಡಿದೀನಲ್ಲಾ, ಅದರ ಉಸಾಬರಿ ನನಗೇಕೆ, ಅದೇನೋ ತೋರಿಸತ್ತೆ, ತೋರಿಸಲಿ ಬಿಡು (ನನಗೆ ಅದರ ಉದ್ದೇಶ ತಿಳಿದಿರಲಿಲ್ಲ ಬಿಡಿ,)ಎಂದೇ ನನ್ನ ಅನಿಸಿಕೆ. ಸರಿ, ಒಮ್ಮೆ ನನ್ನ ಮಗಳಿಗೆ ವಾಟ್ಸ್‌ಆಪ್‌ನಲ್ಲಿ ಒಂದು ಸಂದೇಶ ಕಳುಹಿಸಿದ್ದೆ. ಹಿಂದೆಯೇ ಉತ್ತರ, ಥಟ್‌ಅಂತ ಬಂತು! ಅದೇನೂಂತೀರಾ? 'ನನಗೆ ಯಾಕಮ್ಮ 'slap' ಮಾಡಿದೀಯಾ? ಪುಣ್ಯಕ್ಕೆ ನಿನ್ನ ಎದುರಿಗೆ ಇರಲಿಲ್ಲವಲ್ಲಾ?' ಎಂದು ಬರೆದಿದ್ದಳು. ಇದೇನು ಹೀಗೆ ಅಂದ್ಕೊಂಡು ನಾನು ಕಳುಹಿಸಿದ ಸಂದೇಶ ಓದಿದೆ. ಅದರಲ್ಲಿ also ಎಂಬ ಪದವನ್ನು ನನ್ನ ಸ್ಮಾರ್ಟ್ ಆಟೋಕರೆಕ್ಶನ್ ಹಾಕಿ 'slap' ಎಂದು ತಿದ್ದುಪಡಿ ಮಾಡಿತ್ತು! ಸಧ್ಯ, ನನ್ನ ಮಗಳಿಗೆ ಈ ಮೆಸೇಜ್ ಹೋಯಿತು, ಅವಳಿಗೆ ಸಮಜಾಯಿಷಿ ಮಾಡಿದೆ. ಮತ್ಯಾರಾದರೂ ಹಿರಿಯರಿಗೆ ಹೀಗೆ ಮೆಸೇಜ್ ಹೋಗಿದ್ದರೆ!!! ಎನ್ನಿಸಿ ಒಂದು ಕ್ಷಣ ಗಾಬರಿಯಾಯಿತು.

ಓಹ್, ಇದಾದರೂ ವಾಸಿ ಎನ್ನಬೇಕು. ನಮ್ಮ ಲೇಖಕಿಯರ ಸಂಘದ ಯುವ ಸದಸ್ಯೆಯೊಬ್ಬರು ಅಕಾಲ ಮರಣಕ್ಕೀಡಾದರು. ಎಲ್ಲರಂತೆ ನಾನೂ ವಿಷಾದ ವ್ಯಕ್ತಪಡಿಸಿದೆ. ಮರುಕ್ಷಣವೇ 'ಸಕಾಲಿಕ ಮರಣ???' ಎಂಬ ತಿರುಗುಬಾಣ ನನ್ನತ್ತ ತೀವ್ರವಾಗಿ ನುಗ್ಗಿ ಬಂದಿತ್ತು! ಇದೇನು ಹೀಗೆ ಬರೆದಿದೆ ಎಂದು ನಾನು ಬರೆದ ವಿಷಾದ ಸೂಚಕವನ್ನು ಓದಿದರೆ??? ಅದರಲ್ಲಿ 'ರವರ ಸಕಾಲಿಕ ಮರಣ ವಿಷಾದನೀಯ.' ಎಂದಿದೆ!!! ಅದನ್ನು ಓದಿ ನನಗಾದ ವಿಷಾದ ಹೇಳಲಸದಳ. ಅಕಾಲಿಕ ಎಂದು ನಾನು ಟೈಪ್ ಮಾಡಿದ್ದು, ಅದನ್ನು ನೋಡಿದ್ದು ನೆನಪಿದೆ. ಆದರೆ ನನ್ನ ಸ್ಮಾರ್ಟ್ ಫೋನ್ ಮಾಡಿದ 'ಸಕಾಲಿಕ' ಎಂಬ ತಿದ್ದುಪಡಿಯನ್ನು ಗಮನಿಸದೆ ಹೋದದ್ದು ನನ್ನ 'ಮೊಬೈಲ್‌ದಡ್ಡತನ' ಎಂದು

ನನ್ನನ್ನು ನಾನೇ ಹಳಿದುಕೊಳ್ಳುತ್ತ, ಅಕಸ್ಮಾತ್ತಾಗಿ ಸಂಭವಿಸಿದ್ದ ತಪ್ಪಿಗೆ ಕ್ಷಮೆ ಕೋರಿ ಮತ್ತೊಂದು ವಿಷಾದ ಸೂಚಿಸಿದೆ. ಅಂದು ಅಕಸ್ಮಾತ್ ನನ್ನ ಮಗಳು ಬಂದಳು. ಅವಳಿಗೆ ಈ ವಿಷಯ ತಿಳಿಸಿ ಆಟೋ ಕರೆಕ್ಷನ್ ಬಗ್ಗೆ ನನಗೆ ತಿಳಿವಳಿಕೆ ನೀಡಿ, ಇನ್ನು ಮೇಲೆ ಅದು ಕೊಡುವ ಆಯ್ಕೆಗಳನ್ನು ಸರಿಯಾಗಿ ಗಮನಿಸು. ಇಲ್ಲದಿದ್ದರೆ ಅದು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿ ಬಿಡುತ್ತದೆ ಎಂದು ಎಚ್ಚರಿಸಿದಳು. ಎಷ್ಟೇ ಜತನದಿಂದ ಟೈಪ್ ಮಾಡಿ, ಆಟೋ ಕರೆಕ್ಷನ್ ಸರಿಯಾಗಿದೆಯಾ ಎಂದು ಗಮನಿಸಿದರೂ ಮಧ್ಯೆ ಮಧ್ಯೆ 'ಆಟೋ ಕರೆಕ್ಷನ್' ಎಂಬ ತಂಟೆಕೋರನ ತರಲೆಯನ್ನು ಗಮನಿಸದೆ ಸರ್ರನೆ ಮೆಸೇಜ್ ಕಳುಹಿಸಿ ಬಿಡುತ್ತೇನೆ.

ಅಂತೂ 'ಮೊಬೈಲ್‌ಗೆ ಚೆಲ್ಲಾಟ, ನನಗೆ ಪ್ರಾಣ ಸಂಕಟ' ಎಂಬಂತೆ ಆಗಿ, ಮಧ್ಯೆ ಮಧ್ಯೆ ನನ್ನನ್ನು ಪೇಚಿಗೆ ಸಿಲುಕಿಸಿ, ನನ್ನ 'ಮೊಬೈಲ್ ದಡ್ಡತನ' ಕಂಡು ಸ್ಮಾರ್ಟ್ ಫೋನ್ 'ನಿನಗಿಂತ ನಾನೇ ಸ್ಮಾರ್ಟ್, ಹೆಸರಿಗೆ ತಕ್ಕ ಹಾಗೆ,' ಎಂದು ಬೀಗುತ್ತಿರುತ್ತದೆ.


## ಆತ್ಮೀಯ ಓದುಗರಲ್ಲಿ ವಿನಂತಿ

ನಮ್ಮ ನಿಮ್ಮ ನಡುವೆ ಸಂಪರ್ಕ ಸೇತುವೆಯನ್ನು ಬಲಪಡಿಸುವ ನಿಟ್ಟಿನಲ್ಲಿ ತಾವು ದಯಮಾಡಿ ತಮ್ಮ ಈ ಮೇಯ್ಲ್ ವಿಳಾಸ, ಮೊಬೈಲ್ ಸಂಖ್ಯೆ, ತಮ್ಮ ಹೆಸರನ್ನು ಸೇರಿಸಿ ಹಾಗೂ ಚಂದಾದಾರರ ಸಂಖ್ಯೆಯನ್ನು ಸೇರಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ.

koravanjiaparanji@gmail.com

ಅಪರಂಜಿ ಹವ್ಯಾಸೀ ಲೇಖಕರು ಸೇರಿ
ನಡೆಸುತ್ತಿರುವ ಒಂದು ಸಾಹಸ.
ಇದಕ್ಕೆ ಜಾಹೀರಾತು ದೊರಕಿದರೆ ನಮ್ಮ ಕೆಲಸ
ಸುಗಮ. ಈ ನಿಟ್ಟಿನಲ್ಲಿ ತಾವು ಸಹಕರಿಸಲು
ಇಚ್ಛಿಸಿದರೆ ದಯವಿಟ್ಟು ವಿವರಗಳಿಗೆ
ನಮ್ಮನ್ನು ಸಂಪರ್ಕಿಸಿ:

koravanjiaparanji@gmail.com

# ಸೇರಿಗೆ ಸವಾಸೇರು

**– ಎಚ್. ಶಾಂತರಾಜ ಐತಾಳ್**

ಕೇರಳದ ಮುಖ್ಯಮಂತ್ರಿಯಾಗಿದ್ದ ಇ.ಎಂ.ಎಸ್. ನಂಬೂದರಿಪಾದ್ ಓರ್ವ ಮೇಧಾವಿ ಕಮ್ಯುನಿಷ್ಟ್ ನಾಯಕರಾಗಿದ್ದರು. ಇವರು ಮಾತನಾಡುವಾಗ ಮಾತಿಗೆ ಮೊದಲು ಉಗ್ಗುತ್ತಿದ್ದರು. ಆದರೆ ಇದನ್ನೊಂದು ಅಡಚಣೆ ಎಂದು ಅವರು ಪರಿಗಣಿಸಿದ್ದೇ ಇಲ್ಲ. ಒಮ್ಮೆ ಅವರನ್ನು ಯಾರೋ ಪ್ರಶ್ನಿಸಿದರಂತೆ– 'ಸ್ವಾಮೀ, ನೀವು ಹೀಗೆ ಯಾವಾಗಲೂ ಉಗ್ಗುತ್ತೀರಾ?' ಅಂತ. ಅದಕ್ಕೆ ಅವರು ಥಟ್ಟನೆ ಉತ್ತರಿಸಿದರಂತೆ. 'ಇಲ್ಲ ಇಲ್ಲ, ಮಾತನಾಡುವಾಗ ಮಾತ್ರ!'

ಮಂಗಳೂರಿನ ಖ್ಯಾತ ಸಾಹಿತಿಯೊಬ್ಬರ ತಲೆ ಪೂರ ಬೋಳಾಗಿತ್ತು. ಅವರನ್ನು 'ನಿಮ್ಮ ತಲೆ ಹೀಗೆ ಬೋಳು ಆಗಿರುವುದಕ್ಕೇನು ಕಾರಣ?' ಎಂದು ಓರ್ವ ಪತ್ರಕರ್ತ ಕೇಳಿದಾಗ ಅವರು ನೀಡಿದ ಸಮಜಾಯಿಷಿ ಏನು ಗೊತ್ತಾ?– 'ನೋಡಿ. ತಲೆ ಬೋಳಾಗಲು ಒಟ್ಟು ಇಪ್ಪತ್ತು ವಿವಿಧ ಕಾರಣಗಳಿವೆ. ನನ್ನ ಮಟ್ಟಿಗೆ ಇವುಗಳನ್ನು ಮೀರಿದ ಇಪ್ಪತ್ತೊಂದನೆಯ ಕಾರಣವೆಂದರೆ – ನನ್ನ ತಲೆ ಬೋಳಾಗಲು ಕೂದಲುಗಳು ಉದುರಿದ್ದೇ ಕಾರಣ!' ಪ್ರಶ್ನೆ ಕೇಳಿದವರು ಪೆಚ್ಚಾಗಿ ಬಿಟ್ಟಿದ್ದರು.

ಹೀಗೆ ನಮ್ಮ ಯಾವುದೇ ದೈಹಿಕ ನ್ಯೂನತೆಗಳನ್ನು ಇನ್ನೊಬ್ಬರು ಬೆಟ್ಟು ಮಾಡಿ ತೋರಿಸಿದಾಗ, ಅದಕ್ಕೊಂದು ಹಾಸ್ಯದ ಲೇಪನ ಹಚ್ಚಿ ಉತ್ತರಿಸುವುದೇ ಜಾಣತನ. ಪೂರ್ಣಿಮಕ್ಕ ಎಂಬತ್ತು ಕೆ.ಜಿ. ತೂಕದ ದಢೂತಿ ಹೆಂಗಸು. ಅವರದೇ ಪ್ರಾಯದ ಪಂಚಮಿ ಎಂಬಾಕೆಯ ತೂಕ ಐವತ್ತು ಕೆ.ಜಿ. ಅವರಿಬ್ಬರೂ ಅನ್ಯೋನ್ಯ ಗೆಳತಿಯರಾಗಿದ್ದರೂ ಆಗಾಗ ಒಬ್ಬರನ್ನೊಬ್ಬರು ಲಘುಧಾಟಿಯಲ್ಲಿ ಮೂದಲಿಸುತ್ತಾ ಇರುತ್ತಾರೆ. ತನ್ನ ದಪ್ಪನೆಯ ಗಾತ್ರವನ್ನು ಸಮರ್ಥಿಸಿಕೊಳ್ಳುತ್ತಾ ಪೂರ್ಣಿಮಕ್ಕ ಒಮ್ಮೆ ಪಂಚಮಿಗೆ ಹೇಳಿಯೇ ಬಿಟ್ಟರು. 'ನೋಡಮ್ಮಾ ನಾನು ತುಂಬಿದ ಚಂದ್ರನ ಹಾಗೆ ಇರುವವಳು–ಯಾಕೆಂದರೆ ನಾನು ಪೂರ್ಣಿಮಾ; ಆದರೆ ನೀನಿನ್ನೂ ಐದನೇ ದಿನದ ಕೃಶಕಾಯದ ಕಾಯಿಲೆ ಹಿಡಿದವಳಂತೆ ಶೋಭಿಸುವವಳಾದ್ದರಿಂದ ನೀನು ಪಂಚಮಿ–ನಮ್ಮ ಹೆಸರುಗಳೇ ಸಾಕ್ಷಿ ನಮ್ಮ ಗಾತ್ರಗಳಿಗೆ' – ಇಷ್ಟು ಕೇಳಿದ ಮೇಲೆ ಪಂಚಮಿಗೆ ಪದೇ ಪದೇ ತನ್ನ ಸ್ನೇಹಿತೆಯ ಕಾಲೆಳೆಯುವ ಚಟಕ್ಕೊಂದು ವಿರಾಮ ದೊರಕಿತು!

ನನಗೆ ಈ ಗೆಳತಿಯರ ಹಾಸ್ಯ ಪ್ರಸಂಗವನ್ನು ಕೇಳುವಾಗ ಆಂಗ್ಲ ಸಾಹಿತಿಗಳಿಬ್ಬರ ನೆನಪು ಕಾಡುತ್ತಿರುತ್ತದೆ. ಸಾಹಿತ್ಯ ಲೋಕದ ದಿಗ್ಗಜ ಜಾರ್ಜ್ ಬರ್ನಾರ್ಡ್ ಶಾ ಭೀಮಕಾಯದವರಾಗಿದ್ದರು. ಅದೇ ಅವರ ನೆಚ್ಚಿನ ಗೆಳೆಯ ಜಿ ಕೆ ಚೆಸ್ಟರ್‌ಟನ್ ಕೃಶಕಾಯ. ಒಮ್ಮೆ ಅದೂ ಇದೂ ಮಾತನಾಡುತ್ತಾ ಶಾ ಸಣಕಲ ಚೆಸ್ಟರ್‌ಟನ್‌ರನ್ನು ಮೂದಲಿಸಿದರಂತೆ– 'ಅಲ್ಲಯ್ಯಾ, ನಿನ್ನ ಬತ್ತಿ ಹೋದ

ದೇಹ ನೋಡಿದರೆ ಯಾರಾದರೂ–ಅಯ್ಯೋ ಇಂಗ್ಲೆಂಡಿನಲ್ಲಿ ತೀವ್ರ ಬರಗಾಲ ಬಂದಿದೆ ಎಂದು ಎಣಿಸಲಿಕ್ಕಿಲ್ಲವೇ?' ಎಂದು. ಅದಕ್ಕೆ ಚೆಸ್ಟರ್‌ಟನ್ ತಡವರಿಸದೆ ಉತ್ತರಿಸಿದರಂತೆ. 'ಹೌದು ಹೌದು ಆದರೆ ಬರಗಾಲ ಬರಲು ಕಾರಣರು ಯಾರು ಎಂಬುದನ್ನೂ ಗ್ರಹಿಸಿಯಾರು!' – ಎಂದರು ಸೇರಿಗೆ ಸವಾ ಸೇರು ಎನ್ನುವಂತೆ.

ಉದ್ದಕ್ಕೆ ಬೆಳೆದಿರುವ ವ್ಯಕ್ತಿಗಳು ಗಿಡ್ಡದವರನ್ನು ಮೂದಲಿಸಿ ಮಾತನಾಡುವುದು ಸರ್ವೇ ಸಾಮಾನ್ಯ. ಇಂತಹ ಇಬ್ಬರು ಮಿತ್ರರು ಅಪರೂಪಕ್ಕೆ ಭೇಟಿಯಾದಾಗ ಉದ್ದನೆಯವ ಗಿಡ್ಡನನ್ನು ಕೇಳ್ತಾನಂತೆ 'ಹಲೋ ತುಂಬೇ ಗಿಡ. ಕೆಳಗೆ ಮಣ್ಣಿನ ತೇವಾಂಶ ಈಗ ಹೇಗಿದೆ?' ಎಂದು. ಅದಕ್ಕೆ ಗಿಡ್ಡದವ' ತೇವಾಂಶದ ಸುದ್ದಿ ಒತ್ತಟ್ಟಿಗಿರಲಿ! ಅಲ್ಲಿ ಮೇಲುಗಡೆ ಹವಾಮಾನ ಎಲ್ಲ ಚೆನ್ನಾಗಿದೆಯಾ' – ಎಂದುತ್ತರಿಸಿದನಂತೆ.

ಹೀಗೆ ಸೇರಿಗೆ ಸವಾಸೇರು ಹಿಂದಿರುಗಿಸುವ ಪ್ರಕ್ರಿಯೆ ಗೆಳೆಯರ ನಡುವೆ ಇರಬಹುದು; ಅಪರಿಚಿತರ ಮಧ್ಯೆ ನಡೆಯಬಹುದು! ಬದ್ಧ ದ್ವೇಷಿಗಳೊಳಗೂ ತಲೆ ಎತ್ತಬಹುದು.

ಇಂಗ್ಲೆಂಡಿನಲ್ಲಿ ಥಾಮ್ಸನ್ ಎಂಬ ಒಬ್ಬ ಮಾಂಸದ ವ್ಯಾಪಾರಿ ಇದ್ದ. ಸ್ವಲ್ಪ ಹುಂಬನೂ ಆಗಿದ್ದ ಈ ಥಾಮ್ಸನ್‌ಗೆ ಒಂದು ಮುಂಜಾನೆ ಸ್ಥಳೀಯ ಪತ್ರಿಕೆಯೊಂದರಲ್ಲಿ ಅಚ್ಚರಿ ಕಾದಿತ್ತು. ಅದರಲ್ಲಿ ಆತನದ್ದೇ ಹೆಸರು ವಿಳಾಸಗಳನ್ನು ಹೊಂದಿದವನಿಗೆ ಶ್ರದ್ಧಾಂಜಲಿ ಅರ್ಪಿಸಲಾಗಿತ್ತು. ಮಿ. ಥಾಮ್ಸನ್ ನಿಧನರಾದರು ಎಂಬ ಸುದ್ದಿಯೂ ಪ್ರಕಟವಾಗಿತ್ತು. ಆತತಕ್ಷಣ ಪತ್ರಿಕಾ ಕಚೇರಿಗೆ ಫೋನ್ ಮಾಡಿ ಈ ಪ್ರಮಾದದ ಬಗ್ಗೆ ತಿಳಿಸುತ್ತಾನೆ. ಆದರೆ ಮರುದಿನವೂ ಯಾವುದೇ ತಿದ್ದುಪಡಿ ಪ್ರಕಟವಾಗದಿದ್ದಾಗ ಕ್ರೋಧಗೊಂಡ ಥಾಮ್ಸನ್ ಆ ಕಚೇರಿಗೇ ಹೋಗಿ ಅಬ್ಬರಿಸುತ್ತಾನಂತೆ– 'ನೀವು ನಾಳೆಯೇ ಈ ಸುದ್ದಿ ಸುಳ್ಳು ಎಂದು ಪ್ರಕಟಿಸದಿದ್ದರೆ, ನಿಮ್ಮ ಸಂಪಾದಕರನ್ನು ಸಾರ್ವಜನಿಕವಾಗಿ ಥಳಿಸುತ್ತೇನೆ'– ಎಂದು. ಪತ್ರಿಕೆಯವರು ಮರುದಿನ ಈ ಕುರಿತಾದ ತಿದ್ದುಪಡಿಯನ್ನು ಪ್ರಕಟಿಸಿಯೇ ಬಿಟ್ಟರಂತೆ. 'ಈ ಪತ್ರಿಕೆಯಲ್ಲಿ ಮೊನ್ನೆ ಪ್ರಕಟವಾದಂತೆ ಮಿ. ಥಾಮ್ಸನ್ ಎಂಬ ವ್ಯಕ್ತಿ ನಿಧನರಾಗಿಲ್ಲ ಎಂದು ತಿಳಿಸಲು ವಿಷಾದಿಸುತ್ತೇವೆ'. ಈ ಪ್ರಕಟಣೆಯಿಂದ ಥಾಮ್ಸನ್ ಎಂಬ ಹುಂಬನ ರೋಷ ಎಷ್ಟು ಶಮನವಾಯಿತೋ ಗೊತ್ತಿಲ್ಲ.

ವಿದೇಶಗಳಲ್ಲಿ ವಿದ್ಯೆ ಕಲಿಸುವ ಶಿಕ್ಷಕರಿಗೆ ವಿದ್ಯಾರ್ಥಿಗಳು ಬಯ್ಯುವುದೇನೂ ಹೊಸತಲ್ಲ. ಒಮ್ಮೆ ಮೂರನೇ ಕ್ಲಾಸಿನ ವಿದ್ಯಾರ್ಥಿಯೊಬ್ಬ ತನ್ನ ಶಿಕ್ಷಕಿಗೆ– 'ನರಕಕ್ಕೆ ಹೋಗು–ಗೋ ಟು ಹೆಲ್' ಎಂದು ಬೈದೇ ಬಿಟ್ಟನಂತೆ. ಇದರ ವಿಚಾರಣೆ ನಡೆಸಿದ ಪ್ರಿನ್ಸಿಪಾಲರು ಹುಡುಗನಿಗೆ ಬುದ್ಧಿವಾದ ಹೇಳಿ ಕೊನೆಗೆ ಹೇಳ್ತಾರಂತೆ. 'ನೀನೇನು ಮಾಡಬೇಕಾಗಿಲ್ಲ. ನೀನಾಡಿದ ಮಾತನ್ನು ಹಿಂತೆಗೆದುಕೊಂಡು ಬಿಡು. ಅವರು ನಿನ್ನನ್ನು ಕ್ಷಮಿಸುತ್ತಾರೆ' – ಅಂತ.

ವಿದ್ಯಾರ್ಥಿಯ ಕೋಪ ಇನ್ನೂ ಶಮನವಾಗಿರಲಿಲ್ಲ. ಪ್ರಿನ್ಸಿಪಾಲರು ಇನ್ನೊಮ್ಮೆ ಎಚ್ಚರಿಸಿದಾಗ ಆತ ಟೀಚರ್ ಎದುರು ನಿಂತು ಹೇಳಿದನಂತೆ – 'ನೀವು ನರಕಕ್ಕೆ ಹೋಗಬೇಕಾಗಿಲ್ಲ. ಮಿಸ್'! ಎಂದು.

ಹೀಗೆ ಸೇರಿಗೆ ಸವಾಸೇರು ತೀರಿಸುವ ಎಳೆಯರು ಎಲ್ಲೆಡೆ ಕಾಣಸಿಗುತ್ತಾರೆ. ನಮ್ಮ, ನಿಮ್ಮಲ್ಲೂ ಇರಬಹುದು. ಈಗ ತಾನೆ ಹೈಸ್ಕೂಲ್ ಮೆಟ್ಟಲೇರಿದ ಗಿರೀಶನಿಗೆ ಅಜ್ಜ ಗೋಪಣ್ಣನವರ ಬುದ್ಧಿಮಾತುಗಳು ಅವ್ಯಾಹತವಾಗಿ ಹರಿದು ಬರುತ್ತಿತ್ತು. 'ನೋಡು ಮಗೂ ಅಂಥಾ ದೊಡ್ಡ ವಿಜ್ಞಾನಿ ಥಾಮಸ್ ಆಲ್ವ ಎಡಿಸನ್ ಹೀಗೆ ಹೈಸ್ಕೂಲ್ ಓದುವಾಗ ಎಷ್ಟು ಕಷ್ಟ ಪಡ್ತಿದ್ದ ಗೊತ್ತಾ? ದಕ್ಷಿಣ ಲಂಡನ್‌ನ ಬೀದಿ ಬದಿಯಲ್ಲಿ ಹಾಕಿದ ಲೈಟ್ ಕಂಬಗಳ ಬುಡದಲ್ಲಿ ಕೂತ್ಕೊಂಡು ಅಭ್ಯಾಸ ಮಾಡಿದ್ದಕ್ಕೆ ಆತ ಅಷ್ಟು ದೊಡ್ಡ ವಿಜ್ಞಾನಿಯಾದ' ಎಂದೆಲ್ಲ ಅಜ್ಜ ಗೋಪಣ್ಣ ಬುರುಡೆ ಬಿಡ್ತಾ ಇರುವಾಗ, ಗಿರೀಶ ಮಧ್ಯದಲ್ಲೇ ಅವರ ಮಾತಿಗೆ ಬ್ರೇಕ್ ಹಾಕಿದ.

'ಅಜ್ಜ, ನೀವೀಗ ಹ್ಯಾಟ್ರಿಕ್ ಸಾಧನೆ ಮಾಡಿದ್ದೀರಿ' – ಎಂದನಾತ.

'ಯಾಕೋ ಏನದು ನಿನ್ನ ಹ್ಯಾಟ್ರಿಕ್ಕು?' – ಕೇಳ್ತಾರೆ ಅಜ್ಜ

'ನೀವೀಗ ಮೂರು ಸಬ್ಜಕ್ಟ್‌ಗಳಲ್ಲಿ ಜೀರೋ ಮಾರ್ಕ್ ತೆಗೆದು ಹೀರೋ ಆಗಿದ್ದೀರಿ ಎಂದರ್ಥ' – ಎಂದು ವಿವರಿಸಿದ ಗಿರೀಶ.

'ನಿಮಗೆ ಸಾಮಾನ್ಯಜ್ಞಾನ, ಇತಿಹಾಸ, ವಿಜ್ಞಾನ ಮೂರರಲ್ಲೂ ಸೊನ್ನೆ ಮಾರ್ಕ್ ಅಜ್ಜ. ಯಾಕೆ ಗೊತ್ತಾ? ಎಡಿಸನ್‌ನ ಬಾಲ್ಯವೆಲ್ಲ ಅಮೆರಿಕದಲ್ಲೇ ಆಗಿದ್ದು – ಇಂಗ್ಲೆಂಡಿನಲ್ಲಲ್ಲ. ಹೀಗಾಗಿ ಸಾಮಾನ್ಯ ಜ್ಞಾನದಲ್ಲಿ ನೀವು ಡುಮ್ಕಿ. ಇನ್ನು ಕಲಿಯಲಿಕ್ಕೆ ಭಾರೀ ದಡ್ಡನಾಗಿದ್ದು ಎಂಬ ಕಾರಣಕ್ಕಾಗಿ ಆತನನ್ನು ಶಾಲೆಯಿಂದ ಹೊರಹಾಕಿದ್ದರು. ಮತ್ತೆ ಹೈಸ್ಕೂಲ್ ಓದೋದು ಎಲ್ಲಿ ಬಂತು. ಇತಿಹಾಸದಲ್ಲೂ, ಬಿಗ್‌ಜೀರೋ. ಸರೀನಾ?'

'ಆಯ್ತು ಮಾರಾಯಾ ಮತ್ತೆ ವಿಜ್ಞಾನದಲ್ಲಿ ಯಾಕೆ ನನ್ನನ್ನು ಫೇಲ್ ಮಾಡಿದಿ?' ಎಂದು ಅಜ್ಜ ಮತ್ತೆ ಕಳವಳ ವ್ಯಕ್ತಪಡಿಸುತ್ತಾರೆ. ಅದಕ್ಕೆ ಗಿರೀಶ ಎಡಿಸನ್ ಲೈಟ್ ಕಂಬಗಳ ಬುಡದಲ್ಲಿ ಕೂತು ಅಭ್ಯಾಸ ಮಾಡಿದ ಅಂತ ನಿಮಗೆ ಯಾರು ಹೇಳಿದ್ದು? ಲೈಟ್ ಕಂಬಗಳಿಗೆ ವಿದ್ಯುತ್ ಬಲ್ಬು ಹಾಕಬೇಕಾದರೆ ಅದನ್ನು ಕಂಡು ಹಿಡಿದವರಾರು? ಎಡಿಸನ್ನೇ ಅಲ್ವಾ–ಅದಕ್ಕೇ ಹೇಳಿದ್ದು–ವಿಜ್ಞಾನದಲ್ಲೂ ನಿಮಗೆ 'ಡಕ್'ಅಂತ!

ಹೀಗೆ ಮೂರು ಸಬ್ಜೆಕ್ಟ್‌ಗಳಲ್ಲಿ ಶಹಭಾಸ್‌ಗಿರಿ, ಪಡೆದ ಅಜ್ಜ ಈ 'ಸೇರಿಗೆ ಸವಾಸೇರು' ಮೊಮ್ಮಗನ ಮಾತುಗಳನ್ನು ಮೆಲುಕು ಹಾಕ ತೊಡಗಿದರು.

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ✓ ನಿಮ್ಮ ಓದು ಹೇಗಿರಬೇಕು? ಮೊದಲು: ಕೋಳಿಯಂತೆ ಕೆದಕಿ – ಅಂದರೆ ಆಸಕ್ತಿಯನ್ನು ಗುರುತಿಸಿಕೊಳ್ಳಿ. ಬಳಿಕ: ಇರುವೆಯಂತೆ ಸಂಗ್ರಹಿಸಿ ಅಂದರೆ – ಪುಸ್ತಕಗಳ ಸಂಗ್ರಹ ಮಾಡಿ. ಅನಂತರ: ಹಂದಿಯಂತೆ ಮುಕ್ಕಿರಿ – ಅಂದರೆ ಚೆನ್ನಾಗಿ ಓದುತ್ತಾ ಸಾಗಿ. ಅ ಬಳಿಕ: ಹಸುವಿನಂತೆ ಮೆಲುಕು ಹಾಕಿ – ಅಂದರೆ ಓದಿದ್ದನ್ನು ಮಥನ ಮಾಡಿ. ಕೊನೆಗೆ: ಹೆಬ್ಬಾವಿನಂತೆ ಅರಗಿಸಿಕೊಳ್ಳಿ – ಅಂದರೆ ವಿಷಯಗಳನ್ನು ಜೀರ್ಣಿಸಿಕೊಳ್ಳಿ.
- ✓ ದಿ ಬೆಸ್ಟ್ ಟೈಂ ಟು ಪ್ಲಾಂಟ್ ಎ ಟ್ರೀ ವಾಸ್ 20 ಈಯರ್ಸ್ ಎಗೊ. ದಿ ಸೆಕೆಂಡ್ ಬೆಸ್ಟ್ ಟೈಂ ಈಸ್ ನೌ.
- ✓ ನಾವು ನಮ್ಮ ಮಕ್ಕಳನ್ನು ಬೆಳೆಸುವಾಗ ನಾವು ಇನ್ನೊಂದು ಪೀಳಿಗೆಯನ್ನು ಬೆಳೆಸುತ್ತಿದ್ದೇವೆ ಎಂಬ ಪ್ರಜ್ಞೆಯೊಳಗಿರಬೇಕು.
- ✓ ನಾವು ಏನು ಮಾಡಬಲ್ಲೆವು ಎಂಬುದು ನಮಗೆ ತಿಳಿದಿರುವುದೇ ಇಲ್ಲ.
- ✓ ನಿಸರ್ಗದ ಜತೆ ಒಂದಾಗಲು ರೈತ ಹೆಣಗಬೇಕಿಲ್ಲ. ಏಕೆಂದರೆ ಆತ ನಿಸರ್ಗದ ಜತೆ ಒಂದಾಗಿಯೇ ಇದ್ದಾನೆ.
- ✓ ಆನೆಯ ಗರ್ಜನೆಗಿಂತ ಇರುವೆಯ ಪ್ರಾಮಾಣಿಕ ಅಳಲು ಕೇಳಲು ದೇವರಿಗೆ ಕೇಳಲು ಇಷ್ಟ.
- ✓ ಪ್ರೆ ಅಸ್ ದೊ ನೊ ವರ್ಕ್ ವುಡ್ ಹೆಲ್ಪ್. ವರ್ಕ್ ಅಸ್ ಇಫ್ ನೊ ಪ್ರಯರ್ ವುಡ್ ಹೆಲ್ಪ್.
- ✓ ಜಂಗಲ್ ವಾಣಿ: ನಿನ್ನ ಕಣ್ಣಿಗೆ ಹುಲಿ ಬಿದ್ದಿಲ್ಲದಿರಬಹುದು. ಆದರೆ ಹುಲಿಯ ಕಣ್ಣಿಗೆ ನೀನು ಬಿದ್ದಿರುತ್ತೀಯ.
- ✓ ಬದುಕು ಸುಂದರ ಎಂದೆನಿಸಬೇಕೆ? ನ್ಯೂಸ್ ಚಾನೆಲ್ ನೋಡಬೇಡಿ, ಪೇಪರ್ ಓದಬೇಡಿ, ಸೋಷಿಯಲ್ ನೆಟ್‌ವರ್ಕ್‌ನಿಂದ ಹೊರಬನ್ನಿ.
- ✓ ಎ ಫ್ಲವರ್ ಡಸ್ ನಾಟ್ ಥಿಂಕ್ ಆಫ್ ಕಂಪೀಟಿಂಗ್ ವಿತ್ ದಿ ಫ್ಲವರ್ ನೆಕ್ಸ್ಟ್ ಟು ಇಟ್. ಇಟ್ ಜಸ್ಟ ಬ್ಲೂಮ್ಸ್.
- ✓ ಒಬ್ಬ ನಾಯಕನ ಕೆಲಸ ಇನ್ನಷ್ಟು ನಾಯಕರನ್ನು ಸೃಷ್ಟಿಸುವುದು. ಹಿಂಬಾಲಕರನ್ನಲ್ಲ.
- ✓ ನಿಮ್ಮ ನಗುವಿನ ಹಿಂದಿರುವ ದುಃಖ, ನಿಮ್ಮ ಕೋಪದ ಹಿಂದಿರುವ ಪ್ರೇಮ, ಮತ್ತು ನಿಮ್ಮ ಮೌನದ ಹಿಂದಿರುವ ಕಾರಣವನ್ನು ಗುರುತಿಸುವವನ್ನು ನಂಬಿ.
- ✓ ಇಫ್ ದಿ ರಿಚ್ ಕುಡ್ ಹೈರ್ ಅದರ್ ಪೀಪಲ್ ಟು ಡೈ ಫಾರ್ ದೆಂ ದಿ ಪೂರ್ ಕುಡ್ ಮೇಕ್ ಎ ವಂಡರ್‌ಫುಲ್ ಲಿವಿಂಗ್.
- ✓ ನನಗೆ ಜ್ಯೋತಿಷ್ಯದಲ್ಲಿ ನಂಬಿಕೆ ಇಲ್ಲ ಏಕೆಂದರೆ ನನ್ನದು ಕುಂಭ ರಾಶಿ. ಕುಂಭ ರಾಶಿಯವರಿಗೆ ಅನುಮಾನ ಹೆಚ್ಚು.
- ✓ ಹೆಚ್ಚು ದುಡ್ಡಿದೆ ಎಂದ ಮಾತ್ರಕ್ಕೆ ಹೆಚ್ಚು ಸುಖ ಎಂದೇನಿಲ್ಲ. ಈಗ ನನ್ನ ಬಳಿ 50 ಲಕ್ಷ ಇದೆ. ಆದರೆ 48 ಲಕ್ಷ ಇದ್ದಾಗ ಅಷ್ಟೇ ಸುಖವಾಗಿದ್ದೆ.

# ಮುಖೇಶನ ಅಂಗಡಿ

**-ಪ್ರೇಮಾಭಟ್.**

ನಮ್ಮ ಮನೆಯಿಂದ ಎಡವಿ ಬಿದ್ದರೆ ಮುಖೇಶನ ಅಂಗಡಿ. ಮುಖೇಶ ಹದಿನೈದು ಇಪ್ಪತ್ತು ವರ್ಷಗಳಿಂದ ಔಷಧದ ಅಂಗಡಿ ನಡೆಸಿಕೊಂಡು ಬಂದಿದ್ದಾನೆ. ರಸ್ತೆ ದಾಟಿ ಹೋಗಬೇಕು ಅವನ ಅಂಗಡಿಗೆ ಹೋಗಬೇಕಾದರೆ. ಮುದುಕರು, ಮಕ್ಕಳು, ಯುವಕರು, ಯುವತಿಯರು, ಕುರುಡರು ಕುಂಟರು

ಎಲ್ಲರಿಗೂ ಮದ್ದು ಬೇಕು. ಇವತ್ತು ಕಾಹಿಲೆ ಇಲ್ಲದವರು ಯಾರು ಹೇಳಿ? ಎಲ್ಲರನ್ನು ಒಂದಲ್ಲ ಒಂದು ಕಾಹಿಲೆ ಕಾಡುತ್ತಿರುತ್ತದೆ. ಅದರಲ್ಲಿ ಮಕ್ಕಳಿಂದ ಮುದುಕರವರೆಗೆ ಕಾಡ್ತಿರೋದು ಎಂದರೆ ಸಕ್ಕರೆ ಕಾಹಿಲೆ. ಸಕ್ಕರೆ ಮೂಟೆ ಹೊತ್ತುಕೊಂಡಿರುವ ನಾನು ಮುಖೇಶನ ಅಂಗಡಿಗೆ ಮದ್ದು ಖರ್ಚಾದೊಡನೆ ಹೋಗುತ್ತೇನೆ. ನಾನೇನು 'ಪಿಜ್ಜ' ಮೂಸಿ ನೋಡಿದವಳಲ್ಲ. 'ಜಂಕ್‌ಫುಡ್' ತಿಂದವಳಲ್ಲ, ಅಂಗಡಿಯಲ್ಲಿ ಸಿಗೋ 'ಕುರುಕಲು ತಿಂಡಿ' ಕಡೆಗೆ ಕಣ್ಣೆತ್ತಿ ನೋಡಿದವಳಲ್ಲ, ಬೀದಿ ಬದಿಯಲ್ಲಿ ಮಾರೋ ಪದಾರ್ಥಗಳನ್ನು ಮುಟ್ಟಿ ನೋಡಿದವಳಲ್ಲ. ಇಷ್ಟಾದರೂ ಸಕ್ಕರೆ ಕಾಹಿಲೆ ನನ್ನನ್ನು ಬೆನ್ನು ಬಿಡದೆ ಅಂಟಿಕೊಂಡಿದೆ. ಇದಕ್ಕೆ ಕಾರಣವನ್ನು ಗುಟ್ಟಾಗಿ ನಿಮ್ಮ ಮುಂದೆ ಇಡುತ್ತೇನೆ ಕೇಳಿ. ಮಕ್ಕಳಿಗೆಂದು ಸೊಸೆ ಮಾಡುವ ಸಿಹಿ ತಿಂಡಿಗಳನ್ನು ಒಂದೆರಡು ಕೊಡು ಎಂದು ಕಾಡಿಬೇಡಿ ಪಡೆಯುತ್ತೇನೆ. 'ಪಾಪ! ಅತ್ತೆಗೆ ವಯಸ್ಸಾಗಿದೆ ಮಕ್ಕಳಂತೆ ಕಾಡುತ್ತಾರಲ್ಲ ತಿಂದುಕೊಳ್ಳಲಿ ಬಿಡು' ಎಂದು ಮಾವನಿಗೆ ಕಾಣದಂತೆ ಮುಚ್ಚಿಟ್ಟು ಕೊಡುತ್ತಾಳಲ್ಲ. ಅದನ್ನು ತಿಂದರೆ ಸಾಕು ಅದುವರೆಗೆ ಒಳಗೊಳಗೆ ಅಡಗಿ ಕುಳಿತಿರುತ್ತಿದ್ದ ಸಕ್ಕರೆ ಬುಗಿಲ್ಲನೆ ಮೇಲಕ್ಕೆದ್ದು ಪ್ರಾಣ ಹಾನಿ ಮಾನ ಹಾನಿ ಎರಡನ್ನೂ ಮಾಡಿ ಬಿಡುತ್ತದೆ. ಮುಚ್ಚಿಟ್ಟುಕೊಂಡು ತಿಂದ ಸಕ್ಕರೆಯ ಸವಿಸವಿ ತಿನಿಸು ಕೆರಳಿಸಿದರೆ ಸಾಕು ಯಜಮಾನರಿಗೆ ತಿಳಿದು ಬಿಡುತ್ತದೆ. ಅಲ್ಲಿಗೆ ಮಾನ ಹಾನಿಯಾದಂತೆ. ಸಕ್ಕರೆ ಹೆಚ್ಚಾದೊಡನೆ ಮುಖೇಶನ ಅಂಗಡಿ ನೆನಪಿಗೆ ಬರುತ್ತದೆ. ಓಡುತ್ತೇನೆ ಅವನ ಅಂಗಡಿಗೆ. ರಸ್ತೆ ದಾಟಲು ಭಯ. ಒಂದೆರಡು ಸಾರೆ ಅಂಗಾತ ಬಿದ್ದು ಒದ್ದಾಡಿದ್ದೇನೆ. ಭಯಪಟ್ಟಿದ್ದೇನೆ. ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಓಡಾಡುವ ಕಾರು, ಬಸ್ಸು, ರಿಕ್ಷ, ತರಕಾರಿ ಮಾರುವ ತಳ್ಳುಗಾಡಿಗಳು ಎಲ್ಲಿ ನನ್ನನ್ನು ಆತ್ಮಾಹುತಿ ತೆಗೆದುಕೊಳ್ಳುತ್ತದೋ ಎನ್ನುವ ಭಯ. ಅದೇ ರಸ್ತೆಯಲ್ಲಿ ನಾಲ್ಕಾರು ಅಪಘಾತಗಳು ಆಗಿದ್ದವು. ಸ್ಕೂಟರು ಕಾರಿಗೆ ಹೊಡೆದು ಕಾರು ಜಜ್ಜಿ ಹೋಗಿರುವುದನ್ನು ನೋಡಿದ್ದೇನೆ. ಇನ್ಯಾರೋ ಸ್ಕೂಟರಲ್ಲಿ ಹೋಗುತ್ತಿದ್ದವರಿಗೆ ರಿಕ್ಷ ಹೊಡೆದು ರಕ್ತ ರಸ್ತೆಯಲ್ಲಿ ಸೋರಿ ಹೋಗಿರುವುದನ್ನು ನೋಡಿದ್ದೇನೆ. ಅವನ್ನೆಲ್ಲಾ ಕಂಡಮೇಲೆ ಜಂಗಾಬಲ ಉಡುಗದಿದ್ದೀತೆ ನೀವೆ ಹೇಳಿ.

ನಾವು ವಿಜಯನಗರ ಬಡಾವಣೆಗೆ ಬಂದಾಗ ಈ ಪಾಟಿ ವಾಹನಗಳ ಓಡಾಟವಿರಲಿ ರಸ್ತೆಗಳೆ ಇರಲಿಲ್ಲ, ಹಳ್ಳದಿಣ್ಣೆ ಕೊರಕಲು, ಅವನ್ನೆಲ್ಲಾ ಹತ್ತಿ ಇಳಿದು ಜಾರಿ, ನಾವೇ ಮಾಡಿಕೊಂಡ ಕಿರುದಾರಿಯಲ್ಲಿ ಹೊಸದಾಗಿ ಕಟ್ಟಿಸಿಕೊಂಡಿದ್ದ ಮನೆಗೆ ಪ್ರವೇಶಿಸಿದ್ದೆವು. ರಿಕ್ಷಬೇಕು ಎಂದರೆ ಅರ್ಧ ಕಿ.ಲೋ ಮೀಟರ್ ನಡೆದು ಹತ್ತುತ್ತಿದ್ದೆವು. ಆಗ ಅದೇ

ಪರಮಸುಖ ಎನಿಸುತ್ತಿತ್ತು. ಆದರೆ ಈಗ ಆಗಿರುವ ಬದಲಾವಣೆ ನನ್ನನ್ನು ಮಾತ್ರ ಏನು ಬಹುತೇಕರನ್ನು ಕಂಗೆಡಿಸುತ್ತಿದೆ. ರಸ್ತೆ ಆಗಿದೆ, ಚರಂಡಿಗಳಿವೆ, ವಿದ್ಯುತ್ ಕಂಭಗಳಿವೆ ಆಗೀಗೊಮ್ಮೆ ಮಿಂಚಿ ಮಾಯವಾಗುತ್ತಿದ್ದರೂ ವಿದ್ಯುತ್ ಇದೆ ಎಂಬ ಧೈರ್ಯ. ರಸ್ತೆಗೆ ಡಾಮರು ಹೊದೆಸಿದ್ದಾರೆ. ಸಾಲೋ ಸಾಲು ಮನೆಗಳು ಬಡವಣೆಯಲ್ಲಿ ಆಗಿವೆ. ರಸ್ತೆಯ ಉದ್ದಕ್ಕೂ ಪೊಗದಸ್ತಾಗಿ ನಿಲ್ಲಿಸಿರುವ ಕಾರುಗಳು ಪಾದಾಚಾರಿಗಳಿಗೆ ಕಿರಿಕಿರಿಯುಂಟು ಮಾಡುತ್ತಿದ್ದರೂ ಪೊಗದಸ್ತಾಗಿ ಬೆಳೆದಿದೆ ಬಡಾವಣೆ. ಹೊಸಳ್ಳಿ ಎಂಬ ಹೆಸರಿದ್ದ ನಮ್ಮ ಬಡಾವಣೆ ವಿಜಯನಗರವಾಗಿ ಖ್ಯಾತಿಯನ್ನು ಪಡೆದಿದೆ ಎನ್ನಿ. ಇಲ್ಲಿ ಇಲ್ಲ ಎನ್ನುವುದು ಏನೂ ಇಲ್ಲ. ಶಿಕ್ಷಣ ಸಂಸ್ಥೆಗಳು, ಗ್ರಂಥಲಯಗಳು, ಮಾಲುಗಳು ಸಿನಿಮಾಥಿಯೇಟರ್‌ಗಳು ಬಡಾವಣೆಗೆ ಹತ್ತಿರವಾಗಿಯೇ ಇವೆ. ಯಾವುದನ್ನು ಹುಡುಕಿಕೊಂಡು ಹೋಗಬೇಕಾಗಿಲ್ಲ. ಎಲ್ಲದಕ್ಕಿಂತ ದೊಡ್ಡದು ಎನ್ನಿಸುವುದು ಸುತ್ತಾ ಮುತ್ತ ಸಾಹಿತಿಗಳಿದ್ದಾರೆ. ಶಿಕ್ಷಣ ತಜ್ಞರಿದ್ದಾರೆ. ವೈದ್ಯರಿದ್ದಾರೆ. ಕಳ್ಳಕಾಕರು ಬರದಂತೆ ಹೆದರಿಸಲು ಹೆಚ್ಚಿನ ಮನೆಗಳಲ್ಲಿ ನಾಯಿಗಳಿವೆ. ರಸ್ತೆಯಲ್ಲಿ ಓಡಾಡುವರಿಗೆ ಕಂತ್ರಿನಾಯಿಗಳು ಭದ್ರತೆ ಒದಗಿಸುತ್ತವೆ. ಇಷ್ಟಾದರೂ ಅಲ್ಲೊಂದು ಇಲ್ಲೊಂದು ಸರಗಳ್ಳತನ ಆಗುವುದನ್ನು ತಪ್ಪಿಸಲಾಗಿಲ್ಲ.

ಮುಖೇಶನ ಅಂಗಡಿಗೆ ನೂರಾರು ಜನ ಗ್ರಾಹಕರಿದ್ದಾರೆ. ಮನುಷ್ಯನಿಗೆ ಕಾಹಿಲೆ ಬರದಿದ್ದರೆ ಅವನ ಅಂಗಡಿ ಯಾಕೆ ಬೇಕಿತ್ತು. ಅವನ ಅಂಗಡಿ ಇರುವುದರಿಂದ ಆಸುಪಾಸಿನವರು ದೂರಬಾರ ಹೋಗಬೇಕಿಲ್ಲ. ಮುದುಕನನ್ನು ಮೊಮ್ಮಗ ಕೈ ಹಿಡಿದುಕೊಂಡು ರಸ್ತೆ ದಾಟಿಸುವುದನ್ನು ನೋಡಿದ್ದೇನೆ. ಸಮಯ ಸಿಕ್ಕರೆ ನನ್ನನ್ನು ಸೊಸೆ ಕೈ ಹಿಡಿದು ರಸ್ತೆ ದಾಟಿಸುತ್ತಾಳೆ. ನೆರೆಹೊರೆಯವರಿಗೆ ನಾವಿದ್ದೇವೆ. ನಮಗೆ ಅವರಿದ್ದಾರೆ ಎನ್ನುವ ನಂಬಿಕೆ ಇದೆ. ಈಗ ಮುಖೇಶನ ಅಂಗಡಿ ಜೊತೆಗೆ ಅದರ ಸುತ್ತಮುತ್ತ ಇರುವ ಅಂಗಡಿಗಳನ್ನು ಕೆಡವಿ ಬಹುಮಹಡಿ ಕಟ್ಟಡ ಕಟ್ಟಿಸುತ್ತಾರೆಂದು ಸುದ್ಧಿ ಬಂದಿದೆ. ಈಗ ನಾನು ಮಾತ್ರವೇನು ಮುಖೇಶನ ಅಂಗಡಿಗೆ ಹೋಗುವ ಗ್ರಾಹಕರೆಲ್ಲಾ ಬೇರೆ ಅಂಗಡಿಯನ್ನು ಹುಡುಕಿಕೊಳ್ಳಬೇಕು ಅದೇ ಬೇಜಾರು ನೋಡಿ.

## ಕನ್ನಡ ಸೇವೆ

ನವಂಬರ್ ಬರುತ್ತಿದೆ
ಉಟ್ಟು ಓರಾಟಗಾರರು ಸಿದ್ಧರಾಗುತ್ತಿದ್ದಾರೆ
ಕನ್ನಡಮ್ಮನ ಸೇವೆಗೆ
ಸದ್ದಿಲ್ಲದೇ ಕನ್ನಡಮ್ಮನ ಸೇವೆ ಮಾಡೋಣ
ಕನ್ನಡ ಪುಸ್ತಕ ಕೊಳ್ಳೋಣ
ಅಕ್ಷರ ಜ್ಯೋತಿ ಬೆಳಗೋಣ

# ಇಲ್ಲೇ ಇದೀನಲ್ಲಾ....

**ವೈ.ಎನ್. ಗುಂಡೂರಾವ್.**

ನಾನು ಸಂಪಾದಿಸಿದ 'ಚೌರಸುಖ' ಪ್ರಬಂಧ ಸಂಕಲನದ ಪರಿಚಯವು ಪ್ರತಿಕೆಗಳಲ್ಲಿ ಬಂದನಂತರ ಹಲವಾರು ಮಂದಿ ಪ್ರತಿಗಳಿಗಾಗಿ ಫೋನ್‌ಮಾಡಿ ಕೇಳುತ್ತಲೇ ಇದ್ದರು. ದೂರದ ಊರಿನವರಿಗೆ ಕೊರಿಯರ್ರೊ, ಸ್ಪೀಡ್‌ಪೋಸ್ಟೋ ಯಾವುದೋ ಒಂದು, ಇಲ್ಲೇ ಬೆಂಗಳೂರಿನವರು, ಹತ್ತಿರದ ಬಡಾವಣೆಯಲ್ಲಿದ್ದರೆ, ಕೊಳ್ಳುವವರ ಪರಿಚಯವೂ ಆದೀತೆಂದು ನಾನೇ ಹೋಗಿ ಭೇಟಿ ಮಾಡಿ ಪ್ರಸ್ತಕವನ್ನು ತಲುಪಿಸಿ ಬರುತ್ತಿದ್ದೆ.

ಒಂದು ದಿನ ಅಪರಿಚಿತರೊಬ್ಬರು ಫೋನ್ ಮಾಡಿ ಸಮೀರ್ ಆಚಾರ್ ಎಂದು ಪರಿಚಯಿಸಿಕೊಂಡು ನನಗೊಂದು ಪ್ರತಿ 'ಚೌರಸುಖ' ಬೇಕಿತ್ತು ಎಂದರು. ಅರೆ, ಆಚಾರ್‌ಗೆ ಕೂಡಾ ಚೌರಸುಖ ಓದುವ ಹಂಬಲ ಉಂಟಾಗಿದೆಯಾ ಎಂದು ಖುಷಿಯಾಯ್ತು. ವಿಳಾಸ ತಿಳಿಸಿ ಕಳುಹಿಸುತ್ತೇನೆಂದೆ.

"ಅಯ್ಯೋರಾಮ, ನಾನಿರುವುದು ಆರ್‌ಪಿಸಿ ಲೇಔಟ್, ನೀವು ಗಿರಿನಗರದಲ್ಲಿರುವುದು ಗೊತ್ತು. ಹತ್ತಿರದಲ್ಲೇ ಇದ್ದೇನೆ ಬಂದು ಬಿಡಿ" ಎಂದರು.

ವಿಳಾಸ ಪಡೆದನಂತರ ಸಮಯ ಹೊಂದಿಸಿಕೊಂಡು ಬರುತ್ತೇನೆಂದೆ. ಅದೇಕೋ ಅದರ ಸಮಯಕ್ಕೂ ನನಗೂ ಹೊಂದಾಣಿಕೆಯಾಗದೆ ಬಹಳಷ್ಟು ದಿವಸ ಮುಂದೆಮುಂದಕ್ಕೆ ಹೋಗುತ್ತಲೇಯಿತ್ತು.

ಬೆಳಿಗ್ಗೆ 11 ಗಂಟೆಗೆ ಬಂದು ಬಿಡುತ್ತೇನೆಂದರೆ ರುದ್ರಾಭಿಷೇಕ, ಪುರುಷಸೂಕ್ತ, ಸ್ತ್ರೀಸೂಕ್ತ, ಹೀಗೆ ಯಾವ್ಯಾವುದು ಸೂಕ್ತವೋ ಅವೆಲ್ಲದರ ಪಾರಾಯಣ ಮಾಡುವ ದೈವಭೀರುಗಳು, ಸಂಜೆ ವೇಳೆ ಬಂದು ಬಿಡಿ ಎನ್ನುವರು.

ನನಗೆ ಸಂಜೆ ವೇಳೆ ವಿಪರೀತ ಟ್ರಾಫಿಕ್ಕು, ವೆಹಿಕಲ್ ಓಡಿಸೋದು 'ನಾಟ್ ಕಂಫರ್ಟಬಲ್', ಇದು ನನ್ನ ತೊಂದರೆ.

ಕಡೆಗೊಂದು ದಿವಸ ಹನ್ನೊಂದುವರೆಗೆ ಫಿಕ್ಸ್ ಆಯಿತು. ಹೇಗೆ ನನ್ನನ್ನು ಕಂಡು ಹಿಡಿಯುತ್ತೀರಾ, ಇಬ್ಬರೂ ಒಬ್ಬರ ಮುಖವನ್ನೊಬ್ಬರು ಕಂಡಿಲ್ಲವೆಂದರು.

ಬಿಡಿ ಸಾರ್, ಎಲ್ಲರ ಕೈಲೂ ಮೊಬೈಲಿದೆ ನಿಮ್ಮ ಏರಿಯಾದಲ್ಲೇ ಅಲ್ಲೊಂದು 'ವಾರಣಾಸಿ' ಅನ್ನೋ ಹೊಟೇಲ್ ಇದೆಯಲ್ಲಾ ಅದರ ಮುಂದೆ ನಿಂತಿರುತ್ತೇನೆ. ನಿಮ್ಮ ಮನೆಗೆ ಹತ್ತಿರವೇ, ಅಲ್ಲಿಗೆ ಬಂದು ಕಾಲ್‌ಮಾಡಿ, ಗುರುತು ಹಿಡಿಯಲು ಅನುಕೂಲವಾಗುತ್ತದೆ ಎಂದೆ.

ಬೇಕೆಂದೇ ಹೊಟೇಲಿಂದ ಕೊಂಚದೂರದ ಫುಟ್‌ಪಾತ್‌ನ ಮರದ ಕೆಳಗೆ ನಿಂತು, ಬಹುಶಃ ಇದೇ ದಿಕ್ಕಿನಿಂದ ಬರಬಹುದೆಂದು ಅಂದಾಜಿಸಿ ಕಾಯತೊಡಗಿದೆ.

ಹತ್ತುನಿಮಿಷದ ನಂತರ ಫೋನ್‌ಮಾಡಿ ಹೊರಟಿದ್ದೇನೆ, ನೀಲಿಷರಟು ಧರಿಸಿದ್ದೇನೆ ಎಂದು ಹೇಳಿದ್ದರಿಂದ ಅಷ್ಟು ದೂರದಲ್ಲಿರುವಾಗಲೇ ಅವರನ್ನು ಪತ್ತೆ ಹಚ್ಚಿದೆ.

ಅಷ್ಟುದೂರದಿಂದಲೇ ಕರೆ ಮಾಡಿದರು. "ಅಲ್ಲೇ ಇದ್ದೀನಲ್ಲ, ನಿಮ್ಗೆ ಕಾಣಿಸ್ತಿಲ್ವಾ" ಎಂದೆ.

"ಎಲ್ಲಿ ಸಾರ್ ಕಾಣ್ತಾಯಿಲ್ಲ...."

"ಅಲ್ಲೇ.... ಅಲ್ಲೇ..... ಸ್ವಲ್ಪ ಮುಂದಕ್ಕೆ ಬನ್ನಿ, ಎಡಕ್ಕೆ ನೋಡಿ, ಕೈ ಎತ್ತಿ ಸ್ವಲ್ಪ...." ಎಂದೆ.

ದೂರದಲ್ಲೊಬ್ಬ ಫೋನ್ ಹಿಡಿದು ನಿಂತಿದ್ದು ನೋಡಿ ಅವನ ಬಳಿ ಹೋಗುವಷ್ಟರಲ್ಲಿ ಅವನೇ ಇವರ ಬಳಿ ಬಂದು ಬಿಡಬೇಕೇ! ಸಕತ್ತಾಗಿದ್ದ. ಇವರಿಗೆ ಅವನನ್ನು ನೋಡಿ ಗಾಬರಿ. ಸಾಹಿತಿ ಅನ್ನಿಸ್ಕೊಂಡೋರು ಹೀಗೂ ಇರ್ತಾರಾ ಅನ್ನಿಸಿರಬೇಕು. ನಾನು ಇದನ್ನೆಲ್ಲಾ ಪಕ್ಕದಲ್ಲಿ ನಿಂತು ಗಮನಿಸುತ್ತಿದ್ದೆ.

ಆತ ಹತ್ತಿರ ಬಂದವನು "ನೀನೇನಾ ನನ್ನ ತಂಗಿಗೆ ಫೋನ್ ಮಾಡ್ತಾಯಿದ್ದೋನು, ಏನ್ ಕೈಯೆತ್ತಿ ಕರೀತಿದ್ಯಾ, ಎಷ್ಟು ದಿವಸದಿಂದ ಕಾಟಾ ಕೊಡ್ತಾಯಿದ್ಯಾ? ವಯಸ್ಸಾಗಿದ್ರೂ ಬುದ್ಧಿಬರ್ಲಿಲ್ಲ" ಎಂದು ದಬಾಯಿಸತೊಡಗಿದ.

ಇವರಿಗೆ ಏನು ಹೇಳಲು ತೋಚದೆ ಬ್ಬೆಬ್ಬೆಬ್ಬೇ..... ಎನ್ನತೊಡಗಿದರು.

ನಾನು ಎಂಟ್ರಿಕೊಡುವುದೋ ಬೇಡವೋ ಎಂದು ಯೋಚಿಸುವಷ್ಟರಲ್ಲಿ "ಇನ್ನೊಂದು ಸಾರಿ ಹೀಗೆ ಕಾಲ್ ಮಾಡಿದ್ರೆ ಎಂಕೆ ಮುರ್ದುಬಿಡ್ತೀನಿ" ಎಂದು ರೋಫ್‌ಹಾಕಿ ಹೊರಟು ಹೋದ.

ಸದ್ಯ ಬಚಾವಾದರು ಎನಿಸಿತು. ಅವರಿಗೂ ಕಸಿವಿಸಿಯಾಗಿ "ಒಳ್ಳೆಯ ಸಾಹಿತಿ ಕೈಲಿ ಸಿಕ್ಕಿ ಫಜೀತಿ ಅನುಭವಿಸಬೇಕಾಯ್ತಲ್ಲ" ಎಂಬ ಭಾವನೆ ಅವರ ಮುಖದಲ್ಲಿದ್ದುದನ್ನು ಗಮನಿಸಿದೆ. ಪುನಃ ಫೋನ್ ಮಾಡಿದರು.

ಇಲ್ಲೇ ಇದ್ದೀನಲ್ಲ ಸಾರ್, "ಪಂಚೆ ಉಟ್ಕೊಂಡಿದ್ದೀನಿ... ನೋಡಿ ನಿಮ್ಮ ಬಲಗಡೆಗೆ ಹ್ಞಾಂ.... ಅಲ್ಲೇ.... ಅಲ್ಲೇ,,,," ಎಂದೆ.

ಕೈಕಾಲು ಬೀಸುತ್ತಾ ಪಂಚೆ ಉಟ್ಟವನೊಬ್ಬ ಇವರ ಕಣ್ಣಿಗೆ ಬಿದ್ದುಬಿಡಬೇಕೇ! ಇವರು ಸರಸರನೆ ಪಂಚೆಯವನನ್ನು ಹಿಡಿಯಲು ಓಡಿದರು. ಇನ್ನೇನು ತಮಾಷೆ ಆದೀತೋ ನೋಡೋಣವೆಂದು ಅವರ ಹಿಂದೆ ನಾನೂ ಓಡಿದೆ.

ಇವರು ಹೋಗಿ ನೋಡುತ್ತಾರೆ. ಪಂಚೆ ಉಟ್ಟವ ಬಾಳೇ ಹಣ್ಣು ಮಂಡಿಯವನಂತೆ ಕಂಡದ್ದರಿಂದ ಕಿವಿಚಿದ ಬಾಳೇ ಹಣ್ಣಿನಂತೆ ಮುಖ ಮಾಡಿಕೊಂಡು ಹಿಂದಕ್ಕೆ ತಿರುಗಿದರು. ಇನ್ನು ಜಾಸ್ತಿ ತಮಾಷೆ ಬೇಡ ಅನ್ನಿಸ್ತು.

ನಾನು ಸ್ವಲ್ಪ ಮರೆಯಾಗಿದ್ದು ಕೊಂಡು 'ಸಮೀರ್ ಆಚಾರ್' ಎಂದು ಜೋರಾಗಿ ಕೂಗಿದೆ. ಖುಷಿಯಾಗಿ ಹತ್ತಿರ ಬಂದರು. ನನ್ನ ಮುಖವನ್ನೇ ದಿಟ್ಟಿಸಿ "ಏನ್ಸಾರ್ ಪಂಚೆ ಉಡ್ಕೊಂಡಿದ್ದೀನಿ ಅಂತ ಸುಳ್ಳುಹೇಳಿ ಪ್ಯಾಂಟ್ ಹಾಕೊಂಡು ನಿಂತಿದ್ದೀರಾ ಇಲ್ಲಿ" ಎಂದರು.

" ಸುಮ್ನೆ, ನಿಮ್ಗೆ ಸ್ವಲ್ಪ ಚಮಕ್‌ಕೊಡೋಣ ಅನ್ನಿಸ್ತು ಆಚಾರ್ರೆ" ಎಂದೆ.

"ನೀವು ಬಿಡೀಪ್ಪ, ಹಾಸ್ಯ ಸಾಹಿತಿಗಳು ಏನ್ಬೇಕಾದ್ರೂ ಮಾಡ್ತೀರಾ" ಎಂದು ಮೃದುವಾಗಿ ಬೆನ್ನ ಮೇಲೆ ಬಾರಿಸಿದರು. "ಚೌರಸುಖ" ಕೊಂಡುಕೊಂಡು ಓದಿ ಹೇಳ್ತೇನೆ ಎಂದರು.

ಇಬ್ಬರೂ ಕಾಫಿ ಕುಡಿದು ಸುಮಾರು ಹೊತ್ತು ಸಾಹಿತ್ಯದ ಹರಟೆ ಹೊಡೆದೆವು. ಹೀಗೆ ಒಂದಿಷ್ಟು ತಮಾಷೆ ಮಾಡಿ ಅವರ ಫ್ರೆಂಡ್ಷಿಪ್ಪು ಗಿಟ್ಟಿಸ್ಕೊಂಡೆ.

## ಯಾರು ಹಿತವರು?

**ಸೈಕಲ್ ಬಳಸುವವರು ದೇಶದ ಆರ್ಥಿಕ ಪರಿಸ್ಥಿತಿಗೆ ಮಾರಕ. ಹೇಗೆ ಗೊತ್ತೆ?**

- ಅವರು ಕಾರ್ ಕೊಳ್ಳುವುದಿಲ್ಲ; ಕಾರ್ ಲೋನ್ ಪಡೆಯರು
- ಅವರಿಗೆ ಕಾರ್ ಇನ್‌ಶ್ಯೂರೆನ್ಸ್ ಅನಗತ್ಯ
- ಪೆಟ್ರೋಲ್ ಕೊಳ್ಳರು
- ಕಾರ್ ರಿಪೇರಿಗೆ ಕಳಿಸುವ ಅಗತ್ಯ ಬೀಳದು
- ಅವರಿಗೆ ಬೊಜ್ಜು ಬರುವುದಿಲ್ಲ
- ಆರೋಗ್ಯ ಕಾಪಾಡಿಕೊಳ್ಳುವದರಿಂದ ಔಷಧಿ ಅನಗತ್ಯ, ಆಸ್ಪತ್ರೆಗೆ ಹೋಗುವುದಿಲ್ಲ
- ದೇಶದ ಜಿಡಿಪಿಗೆ ಅವರ ಕಾಣಿಕೆ ಏನೂ ಇಲ್ಲ.

**ಅದರ ಬದಲು ಮೆಕ್ಡೊನಾಲ್ಡ್ ಮಳಿಗೆಗಳೇ ವಾಸಿ.**

ಏಕೆಂದರೆ ಒಂದು ಮಳಿಗೆ 30 ಜನರಿಗೆ ಉದ್ಯೋಗ ದೊರಕಿಸಿ ಕೊಡುತ್ತದೆ– 10 ಮಂದಿ ಹೃದಯತಜ್ಞರಿಗೆ, 10 ಮಂದಿ ದಂತವೈದ್ಯರಿಗೆ, 10 ಮಂದಿ ಬೊಜ್ಜು ಇಳಿಸುವ ತಜ್ಞರಿಗೆ ಮತ್ತು ಮಳಿಗೆಯ ನೌಕರರಿಗೆ.

**ಆದುದರಿಂದ ಈಗ ಹೇಳಿ ದೇಶದ ಆರ್ಥಿಕತೆಯ ದೃಷ್ಟಿಯಿಂದ ಯಾರು ಬೇಕು? ಸೈಕಲ್ ಸವಾರನೆ ಅಥವಾ ಮೆಕ್ಡೊನಾಲ್ಡ್?**

# ‘ಕತ್ತರಿ’ ಪ್ರಯೋಗದ ಸುತ್ತ

**- ಪ್ರಸಾದ್‌ನಾಯಕ್**

‘‘ಹುಡುಕಿದರೆ ಭಗವಂತನೇ ಸಿಕ್ಕಿಬಿಡುತ್ತಾನಂತೆ. ಆದರೆ ನನಗೆ ಕ್ಷೌರದಂಗಡಿ ಮಾತ್ರ ಸಿಕ್ಕಲಿಲ್ಲ’’. ಅನ್ನುತ್ತಿದ್ದರು ನನ್ನ ಸಹೋದ್ಯೋಗಿಯಾದ ಸಿಂಗ್.

**ಹೇರ್‌ಕಟ್ ಎಂದರೆ 350ಕಿಲೋ ಮೀಟರುಗಳ ಒಂದು ಸುದೀರ್ಘ ಪ್ರಯಾಣ!**

ವೀಜ್‌ಗೆ ಬಂದ ಹೊಸತರಲ್ಲಿ ಕಂಡಿದ್ದೆಲ್ಲವೂ ಅಚ್ಚರಿಯಾಗಿದ್ದ ನಮಗೆ ಕ್ರಮೇಣ ಎಲ್ಲವೂ ಕೂಡ ದಿನಚರಿಯಂತೆ ಬದಲಾಗಿದ್ದವು. ಆದರೆ ಭಾರತವನ್ನು ಬಿಟ್ಟು ಬಂದ ಒಂದು ತಿಂಗಳಲ್ಲೇ ನಮಗೆ ಕ್ಷೌರದ ನೆನಪಾಗಿತ್ತು. ನಾವು ಕೂದಲನ್ನು ಮರೆತುಬಿಟ್ಟರೂ ಕೂದಲು ತನ್ನ ಬೆಳೆಯುವ ಪ್ರಕ್ರಿಯೆಯನ್ನು ನಿಲ್ಲಿಸಿಬಿಡುವುದಿಲ್ಲವಲ್ಲಾ!

ಹೀಗೆ ದುಭಾಷಿಯೊಂದಿಗೆ ಕ್ಷೌರದಂಗಡಿಯ ತಲಾಶೆಯಲ್ಲಿ ಹೊರಟಿದ್ದ ನನ್ನ ಸಹೋದ್ಯೋಗಿಗೆ ಎಲ್ಲೆಲ್ಲೂ ಅಚ್ಚರಿಯೇ ಕಾದಿತ್ತು. ಬಹಳಷ್ಟು ಮಂದಿಗೆ ಈ ಬಗೆಯ ಕೂದಲನ್ನು ಕತ್ತರಿಸುವ ವಿಧಾನವೇ ಗೊತ್ತಿಲ್ಲದಿದ್ದ ಪರಿಣಾಮವಾಗಿ ಇದು ನಮ್ಮಿಂದಾಗೋ ಕೆಲಸವಲ್ಲ ಎಂದು ಹೇಳಿ ಹಿಂದೇಟು ಹಾಕಿದ್ದರು. ಹೀಗೆ ಕ್ಷೌರಕ್ಕೆಂದು ಬಂದ ಹಿರಿಯ ಭಾರತೀಯ ಗ್ರಾಹಕನನ್ನು ವಾಪಸ್ ಕಳಿಸಿದ ಕ್ಷೌರದಂಗಡಿಗಳ ಸಂಖ್ಯೆ ಹತ್ತಕ್ಕೆ ಎಂಟರಷ್ಟಾಗಬಹುದು.

ನಾಳೆ ವೀಜ್‌ನ ಮತ್ತೊಂದು ಭಾಗದಲ್ಲಿ ಪ್ರಯತ್ನಿಸಿದರಾಯಿತು ಎಂದು ತಮ್ಮನ್ನು ತಾವೇ ಸಂತೈಸಿಕೊಂಡ ಅವರಿಗೆ ದುರಾದೃಷ್ಟವಶಾತ್ ಮುಂದಿನ ದಿನಗಳಲ್ಲೂ ಸಕಾರಾತ್ಮಕ ಫಲಿತಾಂಶಗಳು ದೊರೆಯಲಿಲ್ಲ. ಹೀಗೆ ಇದೇ ಕಥೆಯು ಮಂದಿನ ನಾಲ್ಕೈದು ದಿನಗಳವರೆಗೂ ಪುನರಾವರ್ತನೆಯಾಯಿತು.

ಈ ಬೆಳವಣಿಗೆಯನ್ನೆಲ್ಲಾ ಗಮನಿಸುತ್ತಿದ್ದ ನಾನು ಸಹಜವಾಗಿಯೇ ಪೇಚಿಗೆ ಬಿದ್ದಿದ್ದೆ. ನಮ್ಮ ಕೇಶವು ಆಫ್ರಿಕನ್ನರಿಗಿಂತ ಭಿನ್ನವಾಗಿರುವುದು ನಿಜವಾಗಿದ್ದರೂ ಅದೇನು ಮಟ್ಟಸವಾಗಿ ಕತ್ತರಿಸಲಾಗದಷ್ಟು ದೊಡ್ಡ ಸಾಹಸವೇ ಎಂಬುದು ನಿಜಕ್ಕೂ ನನ್ನನ್ನು ಯೋಚಿಸುವಂತೆ ಮಾಡಿತ್ತು. ‘‘ಲುವಾಂಡಾಗೆ ಹೋಗಿ ಮಾಡಿಸಿದರಾಯಿತು ಬಿಡಿ. ಅಷ್ಟು ದೊಡ್ಡ ಶಹರದಲ್ಲಿ ಎಲ್ಲಾದರೂ ಮಾಡರ್ನ್ ಸಲೂನ್‌ಗಳಿರುತ್ತವೆ’’, ಎಂದು ಅವರಿಗೆ ಸಲಹೆಯನ್ನು ನೀಡಿದೆ ನಾನು.

ಆದರೆ ಸದ್ಯ ವೀಜ್‌ನಿಂದ ಲುವಾಂಡಾದತ್ತ ತೆರಳಲು ಅಂಥಾ ಯಾವುದೇ ಮುಖ್ಯ

ಕಾರಣಗಳು ನಮ್ಮೊಂದಿಗಿರಲಿಲ್ಲ. ವೀಜ್‌ನಿಂದ ಸಾಕಷ್ಟು ದೂರವಿದ್ದ ಲುವಾಂಡಾಗೆ ಪ್ರಯಾಣಿಸುವುದಾದರೆ ಅದು ತಿಂಗಳಿಗೊಮ್ಮೆ ಮಾತ್ರ ಎಂದು ನಾವು ಮೊದಲೇ ಲೆಕ್ಕಹಾಕಿದ್ದೆವು. ಮೇಲಾಗಿ ಕೇವಲ ಕ್ಷೌರ ಮಾಡಿಸಿಕೊಳ್ಳಲು ಮುನ್ನೂರೈವತ್ತು ಚಿಲ್ಲರೆ ಕಿಲೋಮೀಟರುಗಳನ್ನು ಕ್ರಮಿಸುವುದು ಎಂದರೆ ನಿಜಕ್ಕೂ ಅದೊಂದು ವ್ಯರ್ಥಸಾಹಸವಾಗಿತ್ತು.

ನನ್ನ ಸಲಹೆಯನ್ನು ಯಾವುದಕ್ಕೂ ಇರಲಿ ಎಂದು ಸದ್ಯಕ್ಕೆ ಲೆಕ್ಕಕ್ಕಿಟ್ಟುಕೊಂಡ ಸಿಂಗ್ ನಾಲ್ಕೈದು ದಿನ ಕಷ್ಟಪಟ್ಟು ಹೇಗೋ ಕಾದರು. ಲುವಾಂಡಾದ ನಮ್ಮ ಮುಂದಿನ ಪ್ರಯಾಣಕ್ಕೆ ಕಮ್ಮಿಯೆಂದರೂ ಇಪ್ಪತ್ತು-ಇಪ್ಪತ್ತೈದು ದಿನಗಳು ಬಾಕಿಯಿದ್ದವು. ಆದರೆ ತಲೆಯ ಮೇಲಿರುವ ಕೂದಲು ಕ್ಯಾಲೆಂಡರ್ ನೋಡಿಕೊಂಡು ಬೆಳೆಯುವುದಿಲ್ಲವಲ್ಲಾ? ಈ ಜಂಜಾಟದಲ್ಲೇ ಒಂದು ವಾರವು ವ್ಯರ್ಥವಾದ ನಂತರ ಬೇಸತ್ತು ಹೋದ ಸಿಂಗ್ ಸಾಹೇಬರು ಅಂದು ನನ್ನೆದುರು ಘೋಷಿಸಿಯೇಬಿಟ್ಟರು: ''ಆದದ್ದಾಗಲಿ, ನಾನಿಂದು ಎಲ್ಲಾದರೂ ಹೋಗಿ ಕ್ಷೌರ ಮಾಡಿಸಿಕೊಂಡೇ ಬರುತ್ತೇನೆ'', ಎಂದು. ಈ ಬಾರಿ ಏನು ಮಾಡಬೇಕೆಂದು ತೋಚದ ನಾನು ಅಸ್ತು ಎಂದೆ.

ಆದರೆ ಮುಂದಿನ ಸರದಿಯು ನನ್ನದು ಎಂಬ ಸತ್ಯವೇ ನನ್ನನ್ನು ಮತ್ತಷ್ಟು ಇರಿಸುಮುರುಸಾಗಿಸುತ್ತಿತ್ತು. ಪ್ರವಾಸ ಎಂದರೆ ಎಷ್ಟೆಲ್ಲಾ ತಯಾರಿಗಳನ್ನು ನಾವು ಮಾಡುತ್ತೇವೆ. ಚಿಕ್ಕಪುಟ್ಟ ಸಂಗತಿಗಳ ಬಗ್ಗೆಯೂ ಗಮನವಿಟ್ಟು ಸಿದ್ಧರಾಗುತ್ತೇವೆ. ಆದರೆ ಕ್ಷೌರದಂತಹ ಅಗತ್ಯವೂ ಕೂಡ ನಮ್ಮೆದುರು ಹೀಗೆ ಸವಾಲಾಗಿ ನಿಲ್ಲಬಹುದು ಎಂಬ ಕಲ್ಪನೆಯಾದರೂ ನಮಗೆಲ್ಲಿತ್ತು?

ಆ ದಿನ ಸಿಂಗ್ ಸಾಹೇಬ್ರು ಭಾರತವನ್ನು ಬಿಟ್ಟ ನಂತರ ಮೊದಲ ಬಾರಿ ಅಂಗೋಲಾದ ವೀಜ್‌ನಲ್ಲಿ ಕ್ಷೌರ ಮಾಡಿಸಿಕೊಂಡು ಬಂದಿದ್ದರು. ಕಟ್ಟಿಂಗ್ ಮಾಡಿಸಿಕೊಂಡು ಮನೆಗೆ ಮರಳಿದ ಅವರನ್ನು ಕಂಡ ನನಗೆ ಈ ಹೊಸ ಕೇಶಶೈಲಿಯು ಹೇಗಿದೆ ಎಂಬ ಅನಿಸಿಕೆಯನ್ನು ನೀಡುವ ಅವಶ್ಯಕತೆಯೇ ಬರಲಿಲ್ಲ. ನಾನು ಮಾತನ್ನಾರಂಭಿಸುವ ಮುನ್ನವೇ ''ಇನ್ನೇನು ಮಾಡುವುದು. ಹೇಗೋ ತಲೆಯ ಭಾರವನ್ನು ಇಳಿಸಿಬಿಟ್ಟೆ'', ಎಂದರವರು. ಅವರ ಮಾತನ್ನು ಕೇಳಿದ ನಾನು ಜೋರಾಗಿ ನಕ್ಕರೆ ಅವರೋ ಪೆಚ್ಚಾಗಿ ನಕ್ಕರು. ಆದರೆ ಇತ್ತ ನನ್ನ ತಲೆಯೂ ಕೂಡ ನಿಧಾನವಾಗಿ ಭಾರವಾಗುತ್ತಿತ್ತು. ಸಿಂಗ್ ಸಾಹೇಬ್ರ ಕ್ಷೌರ ಮಾಡಿಸಿಕೊಂಡ ತಲೆಯನ್ನು ನೋಡಿದ ನಾನು ಒಂದಂತೂ ನಿರ್ಧರಿಸಿದ್ದೆ: 'ಹೇಗೋ ತೆವಳಿಕೊಂಡಾದರೂ ಲುವಾಂಡಾ ಸೇರುತ್ತೇನೆ. ಆದರೆ ಇಲ್ಲಿಯ ಕ್ಷೌರಿಕರ ಬಳಿ ತಪ್ಪಿಯೂ ಹೋಗುವುದಿಲ್ಲ'.

ಬಹುಷಃ ಸಿಂಗ್ ಸಾಹೇಬರ ಭಾರತೀಯ ಕೂದಲನ್ನು ಕಂಡ ವೀಜ್‌ನ ಕ್ಷೌರಿಕ ನಿಜಕ್ಕೂ ಗೊಂದಲಕ್ಕೊಳಗಾಗಿದ್ದ. ಬುರುಡೆಗೆ ಅಂಟಿಕೊಂಡಂತಿರುವ ಆಫ್ರಿಕನ್ನರ ಪುಟ್ಟ ಕೂದಲುಗಳಂತಿರದೆ ಈ ಕೂದಲು ಭಿನ್ನವಾಗಿತ್ತು. ದಿನಕ್ಕೆರಡು ಬಾರಿ ತೆಂಗಿನೆಣ್ಣೆಯ ಸಖ್ಯವನ್ನೂ ಹೊಂದಿ ಹುಲುಸಾಗಿ ಬೇರೆ ಇತ್ತು. ಇಂಥಾ ಕೂದಲಯಗಳನ್ನು ಆತ

ಸಿನೆಮಾಗಳಲ್ಲೋ, ಅಕ್ಕಪಕ್ಕದ ಕೆಲ ವಿದೇಶೀಯರಲ್ಲೋ ಗಮನಿಸಿದ್ದರೂ ಕೂಡ ಈ ಬಗೆಯ ಕೂದಲನ್ನು ಹೇಗೆ ಮಟ್ಟಸವಾಗಿ ಕ್ಷೌರ ಮಾಡಬಹುದು ಎಂಬ ಕಲ್ಪನೆಯಾಗಲೀ ಅನುಭವವಾಗಲೀ ಅವನಿಗಿರಲಿಲ್ಲ.

ಹೀಗಾಗಿ ಆತ ತಲೆಯ ತುಂಬಾ ಕಟ್ಟಿಂಗ್ ಮೆಷೀನ್‌ಅನ್ನು ಓಡಿಸಿ ಅವುಗಳನ್ನು ಒಂದೇ ಏಟಿಗೆ ಬಹುತೇಕ ಮಾಯವಾಗಿಸಿದ್ದ. ಹುಲುಸಾಗಿ ಬೆಳೆದ ಕೂದಲು ಏಕಾಏಕಿ ಗಿಡ್ಡವಾದ ನಂತರ ಕತ್ತರಿಯನ್ನು ಬಳಸುವ ಅವಶ್ಯಕತೆಯೇ ಆತನಿಗೆ ಕಂಡಿರಲಿಲ್ಲ. ಮುಂದೆ ಉಳಿದ ಕೂದಲುಗಳನ್ನು ರೇಜರ್ ಬ್ಲೇಡಿನಿಂದ ಅಲ್ಲೊಮ್ಮೆ ಇಲ್ಲೊಮ್ಮೆ ತಾಗಿಸುತ್ತಾ ಎಲ್ಲಾ ಕೂದಲುಗಳು ಮೇಲ್ನೋಟಕ್ಕೆ ಒಂದೇ ಎತ್ತರದಲ್ಲಿರುವಂತೆ ಮಾಡಿ ತನ್ನ ಕರ್ತವ್ಯವನ್ನು ಆತ ಮುಗಿಸಿದ್ದ. ಇನ್ನು 'ಹಾಗೆ ಮಾಡಿ, ಹೀಗೆ ಮಾಡಿ' ಎಂದು ಸಲಹೆಗಳನ್ನು ಕೊಡೋಣವೆಂದರೆ ಸಿಂಗ್ ಸಾಹೇಬ್ರಿಗೆ ಭಾಷೆಯ ಸಮಸ್ಯೆಯು ಎದುರಾಗಿತ್ತು ಕ್ರಾಪ್ ಸ್ಟೈಲ್ ಗಳ ಮನೆ ಹಾಳಾಗಲಿ. ಕನಿಷ್ಠ ಪಕ್ಷ ಅದು ಪ್ರೆಸೆಂಟಬಲ್ ಅನ್ನುವಂತೆಯೂ ಕೂಡ ಇರಲಿಲ್ಲ. ಕ್ಷೌರದ ಕೊನೆಯ ಫಲಿತಾಂಶವು ಬಹುತೇಕ ಅಮೀರ್ ಖಾನನ 'ಘಜಿನಿ'ಯನ್ನು ನೆನಪಿಸುತ್ತಿತ್ತು. ಸಹಜವಾಗಿಯೇ ನಾವು ನಿರಾಶರಾಗಿದ್ದೆವು.

ಕ್ಷೌರಕ್ಕೆಂದು ಕೂರುವ ಮುನ್ನವೇ ''ನಾನೀಗ ಹೇಗಿದ್ದೇನೋ ಹಾಗೆಯೇ ಕ್ಷೌರ ಮಾಡಪ್ಪಾ. ನಾನು ಘಜಿನಿಯ ಅಭಿಮಾನಿಯೂ ಅಲ್ಲ, 'ಸೂಪರ್' ಚಿತ್ರದ ಉಪ್ಪಿಯ ಅಭಿಮಾನಿಯೂ ಅಲ್ಲ' ಎಂದು ಹೇಳಿಯೇ ಕೂರಬೇಕು ಎಂದು ನಾನು ಲೆಕ್ಕ ಹಾಕಿದೆ. ಏಕೆಂದರೆ ದಿನಗಳು ಸುಮ್ಮನೆ ಉರುಳುತ್ತಾ ನನ್ನ ತಲೆಯಲ್ಲೂ ಕೇಶರಾಶಿಯು ಹುಲುಸಾಗಿ ಬೆಳೆದಿತ್ತು. ಹೀಗಾಗಿ ಆದಷ್ಟು ಬೇಗ ಕ್ಷೌರವನ್ನು ಮಾಡಿಸದೆ ವಿಧಿ ಯಿರಲಿಲ್ಲ. ಆದರೆ ಸಿಂಗ್ ಸಾಹೇಬರ ಕ್ಷೌರವನ್ನು ಕಂಡ ನಂತರವಂತೂ ಅದೇನೇ ಆಗಲಿ, ವೀಜ್‌ನ ಕ್ಷೌರಿಕರಿಗೆ ತಲೆಯನ್ನು ಒಪ್ಪಿಸುವುದಿಲ್ಲ ಎಂದು ಮನದಲ್ಲೇ ಪಣತೊಟ್ಟಿದ್ದೆ.

ನಾನು ಸ್ವತಃ ಕ್ಷೌರ ಮಾಡಿದರೂ ಅದಕ್ಕಿಂತ ಚೆನ್ನಾಗಿ ಮಾಡಬಲ್ಲೆನೆಂಬ ಭಾವವು ನನ್ನಲ್ಲಿ ಮೂಡತೊಡಗಿತ್ತು. ತಮಾಷೆಯ ವಿಷಯವೆಂದರೆ ನನ್ನೊಂದಿಗಿದ್ದ ಬಿಳಿಯ ಬೆಲ್ಜಿಯನ್ ಸಹೋದ್ಯೋಗಿಯೊಬ್ಬರು ತಮ್ಮ ಕೂದಲನ್ನು ತಾವೇ ಕ್ಷೌರ ಮಾಡಿಕೊಳ್ಳುತ್ತಿದ್ದರು. ಅರವತ್ತೆರಡರ ಹಿರಿಯರೂ. ಒಂದು ಕಾಲದಲ್ಲಿ ಜ್ಯೂಡೋ ಪಟುವಾಗಿದ್ದವರೂ ಆದ ಇವರು ವೀಜ್‌ಗೆ ಬಂದಾಗಿನಿಂದ ಇದೇ ಅಭ್ಯಾಸವನ್ನು ಮುಂದುವರಿಸುತ್ತಾ ಬಂದಿದ್ದರಂತೆ.

ಹೀಗೆ ತಲೆಯ ಭಾರವನ್ನು ಇಳಿಸಿ ಸಿಂಗ್ ಸಾಹೇಬ್ರು ಹಾಯಾಗಿದ್ದರೆ ಚಿಂತೆಯಿಂದ ತಲೆಕೆರೆದುಕೊಳ್ಳುವ ಸರದಿ ಮಾತ್ರ ನನ್ನದಾಗಿತ್ತು. ಭಾರತದ ಗೆಳೆಯರೊಂದಿಗೆ ಮಾಡಿದ್ದ ಒಂದೆರಡು ವೀಡಿಯೋ ಕರೆಗಳಲ್ಲಿ ನನ್ನನ್ನು ಕಂಡವರು ''ಏನಿದು

ಅವತಾರ?'' ಎಂದು ಕೇಳಿ ಹೊಟ್ಟೆ ತುಂಬಾ ನಕ್ಕಿದ್ದರು. ಏಕೆಂದರೆ ನನಗೆ ಬುದ್ಧಿ ಬಂದಾಗಿನಿಂದ ಹೊಸ ಕೇಶಶೈಲಿಗಳನ್ನು ಪ್ರಯತ್ನಿಸುವ ಸಾಹಸವನ್ನೇ ನಾನು ಮಾಡಿದವನಲ್ಲ. ಇನ್ನು ಸಿನೆಮಾ ನಟರನ್ನು ಅನುಕರಿಸಿ ವಿಚಿತ್ರ ಕೇಶಶೈಲಿಗಳನ್ನು ಮಾಡುವ ರೂಢಿಯೆಲ್ಲಾ ನಮ್ಮ ಮನೆಯಲ್ಲಿರಲಿಲ್ಲ. ಆದರೆ ಈ ಬಾರಿ ರಾಜಧಾನಿಗೆ ತೆರಳಿ ಕ್ಷೌರ ಮಾಡಿಸಿಕೊಳ್ಳುವ ಒಂದೇ ಒಂದು ಕಾರಣದಿಂದ ಕೂದಲನ್ನು ಹಾಗೇ ಬಿಡಬೇಕಾದ ಸಂದಿಗ್ಧವು ಎದುರಾಗಿತ್ತು. ''ಆಯ್ತಪ್ಪಾ, ನಗೋರೆಲ್ಲಾ ನಕ್ಕುಬಿಡಿ. ನನ್ನ ಕಷ್ಟ ನನಗೇ ಗೊತ್ತು'', ಎಂದು ನಿಡುಸುಯ್ದೆ ನಾನು.

ಆದರೆ ನನ್ನ ಪ್ರಯತ್ನಗಳೇನೂ ಕಮ್ಮಿಯಿರಲಿಲ್ಲ. ವೀಜ್‌ನಲ್ಲೇ ಆಗುವುದಾದರೆ ಇಲ್ಲೇ ಆಗಲಿ ಎಂಬ ಆಶಾಭಾವ ನನ್ನದು. ಮೇಲಾಗಿ ಅಂಥದ್ದೊಂದು ಜಾಗವು ಸಿಕ್ಕಿಬಿಟ್ಟರೆ ಮುಂದೆಯೂ ಅಲ್ಲೇ ಹೋಗಿ ನಿಯಮಿತವಾಗಿ ಕ್ಷೌರವನ್ನು ಮಾಡಿಸಿಕೊಳ್ಳಬಹುದು ಎಂಬ ದೂರಾಲೋಚನೆಯೂ ಕೂಡ. ಈ ನಿಟ್ಟಿನಲ್ಲಿ ನನ್ನ ಜೊತೆಗಿದ್ದ ಕೆಲ ಐರೋಪ್ಯರನ್ನು, ಪೋರ್ಚುಗೀಸರನ್ನು ಕೇಳಿ ನೋಡಿದೆ. ಎಲ್ಲರದ್ದೂ ಇದೇ ವ್ಯಥೆಯಾಗಿತ್ತು. ಕೆಲವರು ಬೇರೆ ಆಯ್ಕೆಯಿಲ್ಲವೆಂದು ವೀಜ್‌ನಲ್ಲೇ ಕೆಟ್ಟದಾಗಿ ಕ್ಷೌರ ಮಾಡಿಸಿಕೊಳ್ಳುತ್ತಿದ್ದರೆ, ಆ ರಿಸ್ಕ್ ಅನ್ನು ತೆಗೆದುಕೊಳ್ಳಲು ಇಚ್ಛಿಸದವರು ಲುವಾಂಡಾದವರೆಗೆ ಹೋಗಿಬರುತ್ತಿದ್ದರು.

ಮಾಜಿ ಜ್ಯೂಡೋ ಪಟು ಮತ್ತು ಇಲ್ಲಿಯ ವಸತಿ ಕೇಂದ್ರದ ಮುಖ್ಯಸ್ಥ ಮೊದಲೇ ಹೇಳಿದಂತೆ ತನ್ನ ಕೂದಲಿಗೆ ತಾನೇ ಕತ್ತರಿ ಹಾಕುತ್ತಿದ್ದ. ''ಈ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುವುದೇನೂ ಬೇಡ. ಕ್ಷೌರ ಮಾಡಿದ ಒಂದೆರಡು ವಾರ ಕೆಟ್ಟದಾಗಿ ಕಾಣುತ್ತದಷ್ಟೇ.ಕೂದಲು ಹಲುಸಾಗಿ ಬೆಳೆದನಂತರ ಮತ್ತೆ ಮೊದಲಿನಂತೆಯೇ ಸಾಮಾನ್ಯವಾಗಿ ಕಾಣುತ್ತದೆ''. ಎಂಬ ಸಲಹೆಯೂ ಕೆಲ ಸ್ಥಳೀಯ ಹಿತೈಷಿಗಳಿಂದ ಕೇಳಿ ಬಂದಿತ್ತು. ಸಮಾಧಾನವೇ ಇಲ್ಲದಿದ್ದರೆ ಹೊಂದಿಕೊಂಡು ಹೋಗುವುದಲ್ಲದೆ ಇನ್ನೇನು ಮಾರ್ಗವಿದೆ? ಹಟಹಿಡಿದು ಇಷ್ಟು ದಿನ ಕಾದ ಮೇಲೆ ಇನ್ನೊಂದೆರಡು ದಿನ ಕಾಯುವುದಕ್ಕೇನು ಧಾಡಿ? ಅಂತೂ ಲುವಾಂಡಾಗೆ ತೆರಳುವ ದಿನವು ಬಂದೇ ಬಿಟ್ಟಿತ್ತು. ಸುಮಾರು ಇಪ್ಪತ್ತರಿಂದ ಇಪ್ಪತ್ತೈದು ದಿನಗಳ ಈ ಅವಧಿಯ ಸಂಶೋಧನೆಯಲ್ಲಿ ಒಂದು ಸಂಗತಿಯಂತೂ ನನಗೆ ಸ್ಪಷ್ಟವಾಗಿತ್ತು. ಭಾರತೀಯ ಶೈಲಿಯ ಕೂದಲಿಗೆ ನ್ಯಾಯವನ್ನು ಒದಗಿಸುವಂತಹ ಸಲೂನ್ ವೀಜ್‌ನಲ್ಲಿಲ್ಲ ಎಂಬುದು. ವೀಜ್‌ನಿಂದ ಆರೂವರೆ-ಏಳು ತಾಸುಗಳ ಕಾಲ ರಸ್ತೆ ಮಾರ್ಗವಾಗಿ ಪ್ರಯಾಣಿಸಿ ಕೊನೆಗೂ ಒಂದು ಮಾಡರ್ನ್ ಸಲೂನನ್ನು ಈ ಮಹಾನಗರಿಯಲ್ಲಿ ಹುಡುಕುವಷ್ಟರಲ್ಲಿ ನಾನು ಹೈರಾಣಾಗಿದ್ದೆ.

ಹೊಸ ಭೂಭಾಗವೊಂದನ್ನು ಕಂಡುಹಿಡಿದಾಗ ಕೊಲಂಬಸ್ ಹೇಗೆ ಸಂತಸದಿಂದ ಕುಣಿದಿರಬಹುದೋ ಅಂಥದ್ದೇ ಸಮಾಧಾನವು ನನ್ನಲ್ಲೂ ಅಂದು ಮನೆ ಮಾಡಿತ್ತು.

''ನೋಡಪ್ಪಾ, ಕೇವಲ ಕ್ಷೌರಕ್ಕಾಗಿ ಅಷ್ಟು ದೂರದಿಂದ ಇಲ್ಲಿಯವರೆಗೆ ಬಂದಿದ್ದೇನೆ. ಅದ್ಯಾವ ಪ್ರಯೋಗವೂ, ಹೊಸ ಹೇರ್ ಸ್ಟೈಲೂ ನನಗೆ ಮಾಡಬೇಡ. ಕ್ಷೌರ ಎಂದರೆ ಹೀಗ್ಹೀಗಿರಬೇಕು. ಅಷ್ಟೇ! ಕೊನೆಗೆ ಕನ್ನಡಿಯೆದುರು ನಿಂತರೆ ಮುಖವು ನೋಡುವಂತಿರಬೇಕು'', ಎಂದು ನನ್ನ ಬೇಡಿಕೆಯನ್ನು ಸ್ಪಷ್ಟವಾಗಿ ದುಭಾಷಿಯ ಮೂಲಕವಾಗಿ ಕ್ಷೌರಿಕನಿಗೆ ಹೇಳಿಸಿದೆ. ''ನೀವೇನೂ ತಲೆಕೆಡಿಸಿಕೊಳ್ಳಬೇಡಿ ಸಾರ್. ಭಾರತ, ಪಾಕಿಸ್ತಾನ ಸೇರಿದಂತೆ ಬಹಳಷ್ಟು ದಕ್ಷಿಣ ಏಷ್ಯಾದ ಗ್ರಾಹಕರು ನಮ್ಮಲ್ಲಿದೆ ಬರುತ್ತಾರೆ. ಹೀಗಾಗಿ ಈ ಬಗೆಯ ಕೂದಲನ್ನು ಸಂಭಾಳಿಸುವುದು ಹೇಗೆಂದು ನನಗೆ ಗೊತ್ತಿದೆ'', ಎಂದು ಪೋರ್ಚುಗೀಸ್ ಭಾಷೆಯಲ್ಲಿ ಹೇಳಿದ ಆತ. ದುಭಾಷಿಯ ನೆರವಿನಿಂದ ಆತನ ಭರವಸೆಯನ್ನು ಅರ್ಥಮಾಡಿಕೊಂಡ ನಾನು ನಿರಾಳನಾದೆ. ಕೊನೆಗೂ ಕೇಶಮುಕ್ತಿಯ ಸಮಯವು ಬಂದೊದಗಿತ್ತು.

ಕ್ಷೌರದ ಮೊದಲ ಭಾಗದಿಂದಲೇ ಕತ್ತರಿಯನ್ನು ಕೈಗೆತ್ತಿಕೊಂಡ ಆತನನ್ನು ಕಂಡ ನನ್ನಲ್ಲಿ ನಿರಾಳತೆಯ ಭಾವ. ಈತನ ವಿಧಾನಗಳು ಭಾರತೀಯ ಕ್ಷೌರಿಕರಿಗಿಂತ ಕೊಂಚ ಭಿನ್ನವಾಗಿದ್ದರೂ ಫಲಿತಾಂಶವಂತೂ ಸಮಾಧಾನಕರವಾಗಿತ್ತು. ಆಯ್ಕೆಗಳೇ ಇಲ್ಲದಿದ್ದ ದುರ್ಗಮ ಸ್ಥಳಗಳಲ್ಲಿ ಪರಿಪೂರ್ಣತೆಯನ್ನು ಬಯಸುವುದು ಮೂರ್ಖತನ. ಕೊನೆಗೆ ಆತನಿಗೊಂದು ದೊಡ್ಡ ನಮಸ್ಕಾರವನ್ನು ಧನ್ಯವಾದದೊಂದಿಗೆ ಕೊಟ್ಟು ಅಲ್ಲಿಂದ ಹೊರಬಿದ್ದೆ, ಆಫ್ ಕೋರ್ಸ್, ಇನ್ನು ಮುಂದೆಯೂ ನಿಮ್ಮಲ್ಲಿಗೇ ಬರುತ್ತೇನೆ ಎಂಬ ಭರವಸೆಯೊಂದಿಗೆ. ಅಂದಿನಿಂದ ಕಳೆದೆರಡು ವರ್ಷಗಳಿಂದ ಅಂಗೋಲಾದಲ್ಲಿ ಇದೇ ನನ್ನ ಮಾಮೂಲು ಕ್ಷೌರದಂಗಡಿಯಾಗಿದೆ. ಇಂದಿಗೂ ಹೇರ್ ಕಟ್ ಎಂದರೆ ನನಗೆ 350 ಚಿಲ್ಲರೆ ಕಿಲೋಮೀಟರುಗಳ ಒಂದು ಸುದೀರ್ಘ ಪ್ರಯಾಣ!

ಸೌಜನ್ಯ :ಅವಧಿ

**ಮೊಬೈಲ್ ಕಿವಿಗೆ ಇಟ್ಟುಕೊಂಡು ಗಾಡಿ ಓಡಿಸುತ್ತಿದ್ದ ವ್ಯಕ್ತಿಯನ್ನು ಪೋಲೀಸ್ ತಡೆದರು. ಗಾಡಿ ಓಡಿಸುವಾಗ ಮೊಬೈಲಲ್ಲಿ ಮಾತಾಡಬಾರದು ಅಂತ ಗೊತ್ತಿಲ್ವಾ ಅಂತ ಕೇಳಿದರು. ಅದಕ್ಕೆ ವ್ಯಕ್ತಿ ನಾನು ಮಾತಾಡ್ತಾ ಇರಲಿಲ್ಲ ಸರ್ ಅಂದ. ಮತ್ತೆ ಮೊಬೈಲ್ ಕಿವಿಗಿಟ್ಟುಕೊಂಡಿದ್ದೆ ಅಂತ ಕೇಳಿದರೆ ನಾನು ಮಾತು ಕೇಳಿಸಿಕೊಳ್ತಿದ್ದೆ ಅಂದ. ಯಾರ ಮಾತು ಅಂತ ಕೇಳಿದರೆ ನನ್ನ ಹೆಂಡ್ತಿ ಮಾತು ಅಂದಾಗ ಪೋಲೀಸು ಬೇಸ್ತು.**

# ನಗೆಗಾರ ಗಾಂಧಿ

**– ಬೇಲೂರು ರಾಮಮೂರ್ತಿ**

ಜೀವನದಲ್ಲಿ ಬರುವ ಎಲ್ಲ ಘಟನೆಗಳನ್ನೂ ಹಾಸ್ಯ ಮನೋಭಾವದಿಂದ ನೋಡುವ ಸ್ವಭಾವವನ್ನು ಮಹಾತ್ಮ ಗಾಂಧೀಜಿ ಬೆಳೆಸಿಕೊಂಡಿದ್ದರು. ಅವರ ಬದುಕಿನ ಕೆಲವು ಆಯ್ದ ಸಂಗತಿಗಳು ಹೀಗಿವೆ.

ಒಮ್ಮೆ ಆಘಾಖಾನ್ ಅರಮನೆಯಲ್ಲಿದ್ದಾಗ ಗಾಂಧೀಜಿಗೆ ಮಲೇರಿಯಾ ರೋಗ ತಗುಲಿತು. ಆಗ ಡಾ. ಬಿ.ಸಿ. ರಾಯ್ ಎನ್ನುವವರು ಸುಪ್ರಸಿದ್ದ ಡಾಕ್ಟರು. ಅವರು ಆಗ ಮುಂಬೈನಲ್ಲಿದ್ದರು. ದೆಹಲಿ ಸರ್ಕಾರ ಮುಂಬೈಯಿಂದ ಡಾ. ಬಿ.ಸಿ. ರಾಯ್ ಅವರು ಬಂದು ಗಾಂಧೀಜಿಗೆ ಚಿಕಿತ್ಸೆ ಕೊಡಲು ಅನುಮತಿ ನೀಡಲಿಲ್ಲ. ಆದರೆ ಅನೇಕರು ಮನವಿ ಸಲ್ಲಿಸಿದ ಮೇಲೆ ಡಾ. ರಾಯ್ ಅವರು ದೆಹಲಿಗೆ ಬಂದು ಗಾಂಧೀಜಿಗೆ ಚಿಕಿತ್ಸೆ ಕೊಡಲು ಅನುಮತಿ ನೀಡಿದರು. ಡಾ. ರಾಯ್ ಅವರು ಗಾಂಧೀಜಿ ಅವರ ಬಳಿ ಬಂದು ಮಹಾತ್ಮ ಅವರೇ ನಾನು ಇಲ್ಲಿಗೆ ಯಾರಿಗೆ ಚಿಕಿತ್ಸೆ ನೀಡಲು ಬಂದಿದ್ದೀನಿ ಎಂದುಕೊಂಡಿದ್ದೀರಿ. ಮೋಹನ್ ದಾಸ್ ಕರಮ್ ಚಂದ್ ಗಾಂಧೀಜಿಯವರಿಗೋ ಇಲ್ಲಾ ನಮ್ಮ ರಾಷ್ಟದ 400 ಮಿಲಿಯನ್ ಭಾರತೀಯರನ್ನು ಪ್ರತಿನಿಧಿಸುತ್ತಿರುವ ವ್ಯಕ್ತಿಯನ್ನೋ? ಒಂದು ವೇಳೆ ಮಹಾತ್ಮಾ ಗಾಂಧಿ ಬದುಕಿದರೆ ಎಲ್ಲಾ 400 ಮಿಲಿಯನ್ ಭಾರತೀಯರೂ ಬದುಕುತ್ತಾರೆ. ಒಂದು ವೇಳೆ ಮಹಾತ್ಮಾ ಗಾಂಧಿ ಸತ್ತರೆ ಆ ಎಲ್ಲಾ 400 ಮಿಲಿಯನ್ ಭಾರತೀಯರೂ ಸತ್ತಂತೆಯೇ. ಎಂದರು. ಗಾಂಧಿಜಿ ಆ ಮಾತಿಗೆ ಏನೂ ಪ್ರತಿಕ್ರಿಯೆ ನೀಡಲಿಲ್ಲ. ಕೆಲವು ಕ್ಷಣಗಳ ನಂತರ ಗಾಂಧಿಜಿ ಆಯ್ತು ಡಾಕ್ಟರೇ, ನೀವು ನನಗೆ ಚಿಕಿತ್ಸೆ ನೀಡಿ ಪರವಾಗಿಲ್ಲ. ಆದರೆ ನನಗೊಂದು ಅನುಮಾನ ನೀವು ವೈದ್ಯಕೀಯ ಶಿಕ್ಷಣ ಪಡೆಯುವ ಬದಲು ಕಾನೂನು ಶಿಕ್ಷಣ ಏಕೆ ಪಡೆಯಲಿಲ್ಲ. ಏಕೆಂದರೆ ನಿಮ್ಮ ಮಾತಿನಲ್ಲಿ ವಾದ ಮಾಡುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ ಎಂದರು. ಅದಕ್ಕೆ ರಾಯ್ ಅವರು. ಒಂದಲ್ಲಾ ಒಂದು ದಿನ ಭಗವಂತನ ಅಚ್ಚು ಮೆಚ್ಚಿನ ಸೃಷ್ಟಿಯಾದ ಮಹಾತ್ಮಾ ಗಾಂಧಿಯನ್ನು ಚಿಕಿತ್ಸೆ ನೀಡಿ ಗುಣಮುಖನನ್ನಾಗಿ ಮಾಡುವ ಅವಕಾಶ ನನಗೆ ಸಿಗುತ್ತದೆ ಎಂದು ಆ ಭಗವಂತ ನನ್ನನ್ನು ವೈದ್ಯನನ್ನಾಗಿ ಮಾಡಿದ ಎಂದರು. ಚಿಕಿತ್ಸೆ ಪಡೆಯುತ್ತಾ ಗಾಂಧಿಜಿ ನಗುತ್ತಾ ಪರವಾಗಿಲ್ಲ ನೀವು ವೈದ್ಯರಾದರೂ ವಕೀಲರಂತೆಯೇ ವಾದ ಮಾಡುತ್ತೀರಿ ಎಂದರು.

ಇನ್ನೊಮ್ಮೆ ಒಬ್ಬ ಪತ್ರಿಕಾ ಪ್ರತಿನಿಧಿ ಗಾಂಧಿಜಿಗೆ ನೀವು ಯಾಕೆ ರೈಲಿನಲ್ಲಿ ಯಾವಾಗಲೂ ಮೂರನೇ ದರ್ಜೆಯ ಭೋಗಿಯಲ್ಲೇ ಪ್ರಯಾಣ ಮಾಡುತ್ತೀರಿ ಅಂತ ಕೇಳಿದ. ಗಾಂಧೀಜಿ ಏನು ಮಾಡುವುದು ನಮ್ಮ ದೇಶದ ಯಾವ ರೈಲಿನಲ್ಲೂ ನಾಲ್ಕನೇ ದರ್ಜೆಯ ಬೋಗಿಗಳು ಇಲ್ಲವೇ ಇಲ್ಲ ಹೀಗಾಗಿ ನಾನು ಮೂರನೇ ದರ್ಜೆಯ ಭೋಗಿಯಲ್ಲೇ ಪ್ರಯಾಣ ಮಾಡುತ್ತೇನೆ ಎಂದರು.

ಗಾಂಧೀಜಿಯ ಈ ರೀತಿಯ ಸರಳ ಮಾತುಕತೆಗಳೇ ಅವರನ್ನು ಎಲ್ಲಾ ವರ್ಗದ ಜನರ ನಡುವೆ ಜನಾನುರಾಗಿಯನ್ನಾಗಿ ಮಾಡಿತ್ತು. ಒಮ್ಮೆ ಭಾರತದ ಸ್ವಾತಂತ್ರ್ಯಕ್ಕೆ ಹೋರಾಟ ಮಾಡಿದ ಅನೇಕ ಮಹನೀಯರುಗಳಲ್ಲಿ ಒಬ್ಬರಾದ ಚಕ್ರವರ್ತಿ ರಾಜಗೋಪಾಲಚಾರಿಯವರು ಗಾಂಧೀಜಿಯ ಬಗ್ಗೆ "ಅವರು ಜನರ ಜೊತೆ ಬೆರೆಯಲು ಬಹಳ ಸಂತೋಷ ಪಡುತ್ತಾರೆ. ಅವರು ತಾವೂ ನಗುತ್ತಾ, ಇತರರನ್ನೂ ನಗಿಸುತ್ತಾ, ಎಲ್ಲರಲ್ಲೂ ನಗುವಿನ ಮನೋಭಾವವನ್ನು ಪಸರಿಸುತ್ತಾ ಇರುವ ಗಣ್ಯ ವ್ಯಕ್ತಿ. ಸದಾ ತುಂಟಾಟವಾಡುವ ಮಕ್ಕಳನ್ನೂ, ಸದಾ ಸಂತಸದಲ್ಲಿರುವ ಮಹಿಳೆಯರನ್ನೂ ಗಾಂಧೀಜಿ ಬಹಳ ಮೆಚ್ಚುತ್ತಿದ್ದರು. ಮಕ್ಕಳೊಂದಿಗೆ ಆಡುವುದು ಗಾಂಧೀಜಿಯ ಬಹಳ ಇಷ್ಟದ ಹವ್ಯಾಸಗಳಲ್ಲೊಂದು.

ಗಾಂಧೀಜಿಯ ಪರಮಾಪ್ತರಲ್ಲೊಬ್ಬರಾದ ಸರೋಜಿನಿ ನಾಯ್ಡು ಅವರು ಗಾಂಧೀಜಿಯ ಬಗೆಗೆ ಮಾತಾಡುತ್ತಾ, ಅವರನ್ನು ಬೆಳಗಿನ ಹೊತ್ತು ನೋಡುವುದೇ ಒಂದು ಚೆಂದ. ಅವರ ಬೆಳಗಿನ ನಗುವಿನ ಮೊಗವನ್ನು ಒಮ್ಮೆ ನೋಡಿಬಿಟ್ಟರೆ, ಅಂದಿನ ದಿನವೆಲ್ಲಾ ಬಹಳ ಮಧುರತೆಯಿಂದ ಕೂಡಿರುತ್ತದೆ. ಗಾಂಧೀಜಿಯ ನಗುವಿನ ಅಂಥಾದ್ದೊಂದು ಶಕ್ತಿ ಇದೆ. ಅವರ ತುಸು ಬಾಗಿದ ನಡೆ, ಜನರನ್ನು ನೋಡುವ ರೀತಿ ಇವುಗಳಲ್ಲೇ ಒಂದು ರೀತಿಯ ಸದಭಿರುಚಿಯ ಹಾಸ್ಯ ಹೊಮ್ಮುತ್ತಿರುತ್ತದೆ. ಇದರ ಜೊತೆಗೆ ಅವರಿಗೆ ಇದ್ದ ಜೀವನೋತ್ಸಾಹ ಅವರನ್ನು ಭೇಟಿ ಮಾಡಿದವರನ್ನೂ ಬಡಿದೆಬ್ಬಿಸುತ್ತದೆ ಎಂದಿದ್ದರು. ಇನ್ನೊಂದು ಸಂದರ್ಭದಲ್ಲಿ ಅವರು ಗಾಂಧೀಜಿ ನಗುತ್ತಾರೆ ಏಕೆಂದರೆ ಅವರು ಜೀವನದ ಎಲ್ಲ ಕಹಿ ಘಟನೆಗಳನ್ನೂ ಮರೆಯುವಂತೆ ಮತ್ತು ಗಾಂಧೀಜಿ ನಗುತ್ತಾರೆ ಅವರಿಗಿರುವ ದೇಶದ ಎಲ್ಲ ಸಮಸ್ಯೆಗಳ ಭಾರದ ಪರಿವೆಯನ್ನು ಮರೆಯಲು ಎಂದಿದ್ದರು

ಈ ಎಲ್ಲಾ ಮಾತಿಗೆ ಕಳಸವಿಟ್ಟಂತೆ ಗಾಂಧೀಜಿ ಒಮ್ಮೆ ನನಗೇನಾದರೂ ಹಾಸ್ಯ ಪ್ರಜ್ಞೆ, ಹಾಸ್ಯ ಮನೋಭಾವ, ಹಾಸ್ಯವನ್ನು ಅರಗಿಸಿಕೊಳ್ಳುವ ಶಕ್ತಿ, ಹಾಸ್ಯವನ್ನು ಆಸ್ವಾದಿಸುವ ಗುಣ ಇವುಗಳು ಇಲ್ಲದೇ ಹೋಗಿದ್ದರೆ ಬಹಶ: ನಾನು ಎಂದೋ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ ಎಂದಿದ್ದರು. ಇವುಗಳಿಂದ ಗಾಂಧೀಜಿಯ ಬದುಕಿನಲ್ಲೂ ಹಾಸ್ಯ ಅದೆಂಥಾ ಮಹತ್ತರ ಪಾತ್ರ ವಹಿಸಿತ್ತು ಎಂದು ತಿಳಿಯುತ್ತದೆ. ಗಾಂಧೀಜಿ ನಾನು ಅಹಿಂಸಾ ಸೇನೆಯ ದಂಡನಾಯಕ ಎಂದು ಕರೆದುಕೊಂಡಿದ್ದರು. ಒಮ್ಮೆ ಅವರು ಚೀನಾ ಪ್ರವಾಸದಲ್ಲಿದ್ದಾಗ ಅವರಿಗೆ ಒಂದು ಶಾಲು ಉಡುಗೊರೆಯಾಗಿ ಬಂತು. ಅದನ್ನು ನೋಡಿದ ಗಾಂಧೀಜಿ ಶಾಲು ಇಷ್ಟೊಂದು ಗುಣಮಟ್ಟದ್ದಾಗಿದೆ. ಚೀನಾ ದೇಶದಲ್ಲಿ ಇಂಥಾ ಶಾಲನ್ನು ಹೆಣೆಯುವ ಹುಡುಗಿ ಇದ್ದಾಳೆ ಎಂದರೆ ನಾನು ನನ್ನ ವಯಸ್ಸನ್ನೂ ಮೀರಿ ಅವಳನ್ನು ಮದುವೆಯಾಗುವ ಆಸೆ ಹೊಂದಿದ್ದೇನೆ ಎಂದರು. ತಮ್ಮ ಮಾತುಗಳನ್ನು ತಿರುಚಿ ಬರೆದಿರುವ ಪತ್ರಿಕೆಯ ವರದಿಗಾರನನ್ನು ಕಂಡ ಗಾಂಧೀಜಿ ನನಗೆ ಹಾಸ್ಯ ಮನೋಭಾವ ಇರುವುದರಿಂದಲೇ ಇಂಥಾ ಆಭಾಸಗಳನ್ನೂ ನಾನು ಸಹಿಸಿಕೊಂಡು ಬಂದಿದ್ದೇನೆ. ಇಲ್ಲದಿದ್ದರೆ ನಿಮ್ಮ

ವರದಿಗಳನ್ನು ನೋಡಿ ನಾನು ಹುಚ್ಚನಾಗಿಬಿಡುತ್ತಿದ್ದೆ. ನಿಮ್ಮನ್ನು ಕಂಡು ನಾನು ಸಿಟ್ಟಿನಿಂದ ನೀವು ನಾನು ಹೇಳಿದ ಮಾತುಗಳನ್ನು ತಿರುಚಿ ಬರೆದಿದ್ದೀರಿ, ನಿಮಗೂ ನಿಮ್ಮ ಪತ್ರಿಕೆಗೂ ನನಗೂ ಯಾವ ಸಂಬಂಧವೂ ಇಲ್ಲ. ಇನ್ನು ಮುಂದೆ ನೀವು ನನ್ನ ಸಂದರ್ಶನಕ್ಕೆ ಬರಬೇಡಿ ಎಂದು ಗದರಿಬಿಡಬಹುದಿತ್ತು. ಆದರೆ ನಾನು ಆಗಲೇ ಹೇಳಿದ ಹಾಗೆ ನನಗೆ ಹಾಸ್ಯ ಮನೋಭಾವ ಇರುವುದರಿಂದ ನಿಮ್ಮ ಕೆಲಸವನ್ನು ನಿರ್ಲಕ್ಷಿಸಿ ನೀವು ಮತ್ತೆ ಮತ್ತೆ ಬಂದರೂ ನಾನು ಸಂದರ್ಶನವನ್ನು ಕೊಡುತ್ತೇನೆ ಎಂದಿದ್ದರು.

ಒಂದು ಸಾರಿ ಗಾಂಧೀಜಿ ಸಬರಮತಿ ಆಶ್ರಮದಲ್ಲಿದ್ದಾಗ ಒಂದು ಹುಡುಗಿ ಅವರನ್ನು ಭೇಟಿ ಮಾಡಲು ಓಡೋಡಿ ಬಂದಿದ್ದಳು. ಆಗ ಅವಳು ತನ್ನ ಬಿಳಿ ಉಡುಪಿನ ಮೇಲೆ ನೀಲಿ ಶಾಯಿ ಚೆಲ್ಲಿಕೊಂಡಿದ್ದನ್ನೂ ಗಮನಿಸದೇ ಓಡಿ ಬಂದಿದ್ದಳು. ಅವಳನ್ನು ನೋಡಿದ ಗಾಂಧೀಜಿ ಹಾರ್ದಿಕವಾಗಿ ನಗುತ್ತಾ ಬಾಮ್ಮ, ನಿನ್ನ ಜೊತೆ ಗಂಗಾ ಜಮುನಾ ಇಬ್ಬರನ್ನೂ ಕರೆತಂದಿದ್ದೀಯಲ್ಲ ಅಂದಾಗ ಅಲ್ಲಿದ್ದವರೆಲ್ಲಾ ನಕ್ಕರು. ಗಾಂಧೀಜಿ ಯಾಕೆ ಹಾಗೆ ಹೇಳಿದ್ದು ಅಂತ ಕುತೂಹಲದಿಂದ ಇದ್ದಾಗ ಗಾಂಧೀಜಿ ನೋಡಿ ಜಮುನಾ ನದಿಯ ನೀರಿನ ಬಣ್ಣ ಸ್ವಲ್ಪ ಗಾಢವಾಗಿದೆ, ಆದರೆ ಗಂಗಾ ನದಿಯ ನೀರಿನ ಬಣ್ಣ ಬಹಳ ತೆಳು. ಇಲ್ಲಿ ಈ ಹುಡುಗಿಯ ಉಡುಪಿನಲ್ಲೂ ತೆಳು ಮತ್ತು ಗಾಢ ಮಿಶ್ರಣವಾಗಿದೆ ಅದಕ್ಕೆ ಗಂಗಾ ಜಮುನಾ ಇಬ್ಬರನ್ನೂ ಕರೆತಂದಿದ್ದೀಯ ಎಂದಾಗ ಅಲ್ಲಿದ್ದವರ ಮುಖದಲ್ಲಿ ಮತ್ತೊಮ್ಮೆ ನಗು ಪ್ರಜ್ವಲಿಸಿತು.

ಮಹಾತ್ಮಾ ಗಾಂಧಿಯವರು ಒಮ್ಮೆ ಬೆಂಗಳೂರಿಗೆ ಬಂದಿದ್ದಾಗ ಅವರಿಗಾಗಿ ಅವರ ಸ್ನೇಹಿತರು ಚೌಡಯ್ಯನವರ ಪಿಟೀಲು ವಾದನದ ಕಛೇರಿ ಏರ್ಪಾಡು ಮಾಡಿದ್ದರು. ಆಗ ಸಭಾಂಗಣದಲ್ಲಿ ಗಾಂಧಿಜಿಯ ಪಕ್ಕ ಕೂತಿದ್ದವರು ನಮ್ಮ ಟಿ.ಪಿ. ಕೈಲಾಸಂ. ಸ್ವಲ್ಪ ಹೊತ್ತು ಪಿಟೀಲು ವಾದನವನ್ನು ಕೇಳಿ ಆನಂದಿಸಿದ ಗಾಂಧಿಜಿ ಪಕ್ಕದಲ್ಲಿ ಕೂತಿದ್ದ ಕೈಲಾಸಂ ಅವರನ್ನು ಪಿಟೀಲು ನುಡಿಸುತ್ತಿರುವವರ ಹೆಸರು ಏನು ಅಂತ ಕೇಳಿದರು. ಅದಕ್ಕೆ ಕೈಲಾಸಂ, ನೋಡಿ ಗಾಂಧೀಜಿ ನೀವಾದರೂ ಪ್ರಖ್ಯಾತ ನಾನ್–ವಯೋಲನಿಸ್ಟ್ ಆದರೆ ಪಿಟೀಲು ನುಡಿಸುತ್ತಿದ್ದಾರಲ್ಲ ಚೌಡಯ್ಯ ಅವರು ಪಕ್ಕಾ ವಯೊಲನಿಸ್ಟ್ ಅಂದಾಗ ಗಾಂಧೀಜಿ ಹಲ್ಲಿಲ್ಲದ ತಮ್ಮ ಬೊಚ್ಚು ಬಾಯಿ ತೆರೆದು ನಕ್ಕಿದ್ದೇ ನಕ್ಕಿದ್ದು.

ಒಮ್ಮೆ ಒಂದು ಮಗು ಗಾಂಧಿಜಿಯನ್ನು ಬಾಪೂ ನಾವು ಎಷ್ಟೊಂದು ಪ್ರಶ್ನೆ ಕೇಳಿದರೂ ನೀವು ಬಹಳ ಚುಟುಕಾಗಿ ಉತ್ತರ ಕೊಡುತ್ತೀರ. ಆದರೆ ಭಗವದ್ಗೀತೆಯಲ್ಲಿ ಅರ್ಜುನ ಒಂದು ಸಣ್ಣ ಪ್ರಶ್ನೆ ಕೇಳಿದರೂ ಸಾಕು ಶ್ರೀಕೃಷ್ಣ ಒಂದು ಅಧ್ಯಾಯದಷ್ಟು ಉತ್ತರ ಕೊಡುತ್ತಾನಲ್ಲ ಅಂತ. ಅದಕ್ಕೆ ಗಾಂಧೀಜಿ ನಗುತ್ತಾ ಏನು ಮಾಡಲಿ ಮಗು, ಶ್ರೀಕೃಷ್ಣನಿಗಾದರೂ ಪ್ರಶ್ನೆ ಕೇಳುತ್ತಾ ಇದ್ದದ್ದು ಅರ್ಜುನ ಒಬ್ಬನೇ. ಆದರೆ ನನಗೆ ನಿನ್ನಂಥಾ ನೂರಾರು ಅರ್ಜುನರು ಇದ್ದಾರಲ್ಲ, ನಾನು ಅವರಿಗೆಲ್ಲಾ ಉತ್ತರ ಕೊಡಬೇಕಲ್ಲ ಎಂದು ನಕ್ಕರು.

(ಸಂಗ್ರಹ)

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR No. of Pages: 40+4 APARANJI KANNADA MONTHLY.